ಅಧ್ಯಕ್ಷರು :– ನೀವು ಈಗಲೇ ಉತ್ತರ ಕೊಟ್ಟುಬಿಟ್ಟರೆ ಮತ್ತೆ ಸೋಮವಾರ ಇದರ ಬಗ್ಗೆ ಚರ್ಚೆ ಮಾಡುವ ಅವಶ್ಯಕತೆ ಏನಿದೆ?

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಡುವುದಕ್ಕೆ ಈಗ ಹೋಗುತ್ತಿಲ್ಲ. ಇವತ್ತು ಮನೆ ಹತ್ತಿರ ಹೋದರೆ ಅಲ್ಲಿ ಮುನ್ನೂರು ಜನರಿದ್ದಾರೆ, ಆಫೀಸ್ ಹತ್ತಿರ ಒಂದು ಮುನ್ನೂರು ಜನರಿದ್ದಾರೆ, ಏನೋ ಒಂದು ಮೆಸೇಜ್ ಹೋಗುತ್ತದೆ, ಅದು ತಪ್ಪು ಮೆಸೇಜ್ ಹೋಗಿ ಅವರಲ್ಲಿ ತಪ್ಪು ಕಲ್ಪನೆ ಹೋಗುವುದು ಬೇಡ. ನಾನು ಒಂದು ವಿಷಯವನ್ನು ಸ್ಪಷ್ಟಪಡಿಸುತ್ತೇನೆ. ಈಗ 391 ಜನರದ್ದು ಆಪ್ಲಿಕೇಶನ್‌ಗಳೇನಿವೆ ಅದರ ಬಗ್ಗೆ ವೆರಿಫಿಕೇಶನ್ ನಡೆಯುತ್ತಿದೆ, ರಿಜೆಕ್ಟ್ ಮಾಡಿಲ್ಲ. ರಿಜೆಕ್ಟ್ ಮಾಡಿದೆ ಎಂದು ತಪ್ಪು ಮಾಹಿತಿ ಹೋಗುವುದು ಬೇಡ. ಇದರ ಬಗ್ಗೆ ಸಮಗ್ರವಾದಂಥ ಉತ್ತರವನ್ನು ಮಾನ್ಯ ಸದಸ್ಯರುಗಳು ಚರ್ಚೆ ಮಾಡಿದ ಮೇಲೆ ನಾನು ಉತ್ತರ ಕೊಡುವುದಕ್ಕೆ ತಯಾರಾಗಿದ್ದೇನೆ. ನಿಯಮ 69 ರಡಿಯಲ್ಲಿ ಎಂದು ತಾವು ಹೇಳಿದ್ದೀರಿ. ನೀವು ಯಾವತ್ತು ಹೇಳುತ್ತೀರೋ ಅವತ್ತು ಚರ್ಚೆಯಾದ ಮೇಲೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಆಗಲಿ, ಈಗ ಮಾನ್ಯ ಯಡಿಯೂರಪ್ಪನವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬೇಕು.

5. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಮುಂದುವರೆದ ಚರ್ಚೆ

ಶ್ರೀ ಬಿ.ಎಸ್.ಯಡಿಯೂರಪ್ಪ (ಶಿಕಾರಿಪುರ) :– ಸನ್ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರು ರಾಜ್ಯ ವಿಧಾನ ಮಂಡಲದಲ್ಲಿ ಮಾಡಿದಂಥ ಭಾಷಣದ ಮೇಲೆ ವಂದನಾ ನಿರ್ಣಯದ ಮೇಲೆ ಆಡಳಿತ ಪಕ್ಷದ ಇಬ್ಬರು ಮತ್ತು ಪ್ರತಿಪಕ್ಷದ ನಾಯಕರು ಈಗಾಗಲೇ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ಮುಖ್ಯಮಂತ್ರಿಗಳೂ ಕೂಡ ಈಗ ಈ ಸಭೆಯಲ್ಲಿರುವಂಥದ್ದು ಸ್ವಾಗತಾರ್ಹವಾದ ಸಂಗತಿಯಾಗಿದೆ. ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ಚುನಾವಣೆ ಫಲಿತಾಂಶದ ಬಗ್ಗೆ ತುಂಬಾ ಅರ್ಥಗರ್ಭಿತವಾದಂಥ ಒಂದು ಕಾರ್ಟೂನ್ ದಿನಾಂಕ 15–05–2013 ರ ಹಿಂದು ಪತ್ರಿಕೆಯಲ್ಲಿ ಬಂದಿದೆ. ಆ ಕಾರ್ಟೂನ್‌ನಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು Thank you Sonia jee, Thank you Rahul jee, Thank you Manmohan jee ಎಂದು ಮುಖ್ಯಮಂತ್ರಿಗಳು ಹೇಳುತ್ತಿರುವಂಥದ್ದು, ಮತ್ತೆ

ನಿಮ್ಮ ಮುಖ್ಯಮಂತ್ರಿಯ ಕುರ್ಚಿಯ ಹಿಂದೆ ನಾಲ್ಕು ಜನ ನಿಂತಿರುವಂಥದ್ದು, ಈ ಕಾರ್ಟೂನ್‌ನ್ನು ತೋರಿಸಿದ್ದಾರೆ. ಬಹುಶಃ ಇದನ್ನು ಎಲ್ಲರೂ ಗಮನಿಸಿದ್ದಾರೆ. ಇಡೀ ದೇಶದ ಜನ ಈ ಕಾರ್ಟೂನ್‌ನ್ನು ನೋಡಿದ್ದಾರೆ. ಇದನ್ನು ಏಕೆ ನಾನು ಪ್ರಾರಂಭದಲ್ಲಿಯೇ ಹೇಳುತ್ತಿದ್ದೇನೆಂದರೆ, ಬಹುಶಃ ಭಗವಂತನ ಇಚ್ಛೆ ಇತ್ತು. ಬಹಳ ವರ್ಷಗಳಿಂದ ಕಾದಿದ್ದಂಥ ಸನ್ಮಾನ್ಯ ಸಿದ್ದರಾಮಯ್ಯನವರು ಈ ರಾಜ್ಯದ ಮುಖ್ಯಮಂತ್ರಿಗಳಾಗಬೇಕು ಎನ್ನುವಂಥದ್ದು ಭಗವಂತನ ಇಚ್ಛೆ ನಿಮ್ಮ ಆಸೆ ಇತ್ತು, ಜನರ ಆಸೆಯಿತ್ತು. ಅದು ಈಡೇರಿದೆ, ಅದಕ್ಕೆ ನಾನು ಸಂತೋಷಪಡುತ್ತೇನೆ. ಆದರೆ ಒಂದು ಕಿವಿಮಾತನ್ನು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಕೊನೆಯ ಪಕ್ಷ ನಿಮ್ಮ ಸಚಿವಸಂಪುಟದ ಸದಸ್ಯರು The Hinduನಲ್ಲಿ ಬಂದಿರುವಂಥ ಕಾರ್ಟೂನ್ ಅನ್ನು ಮನೆಯಲ್ಲಿ ಇಟ್ಟುಕೊಂಡು ಪ್ರತಿನಿತ್ಯ ನೋಡಿದರೆ ಬಹುಶಃ ಇದರ ಮಹತ್ವ ಅವರಿಗೆ ಅರ್ಥವಾಗುತ್ತದೆಂಬ ಕಿವಿ ಮಾತನ್ನು ಅವರಿಗೆ ಹೇಳಲಿಚ್ಛೆಸುತ್ತೇನೆ. ನಾನು ಕಳೆದ ನಲವತ್ತು ವರ್ಷಗಳ ರಾಜಕಾರಣದಲ್ಲಿ ಅನೇಕ ಏರಿಳಿತಗಳನ್ನು ಕಂಡಿದ್ದೇನೆ, ಸವಾಲುಗಳನ್ನು ಎದುರಿಸಿದ್ದೇನೆ. ಒಬ್ಬ ಸಾಮಾನ್ಯ ರೈತನ ಮಗನಾದ ನಾನು ಮತ್ತು ಮಾನ್ಯ ಕುಮಾರಸ್ವಾಮಿಯವರು, ನಾವಿಬ್ಬರೂ ಒಟ್ಟಾಗಿ ಸೇರಿ ಸರ್ಕಾರ ಮಾಡಿ, ನಾನು ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದಂಥದ್ದು, ಮುಖ್ಯಮಂತ್ರಿಯಾಗಿ 7 ದಿವಸಗಳು ಕೆಲಸ ಮಾಡಿದ ನಂತರ ಏನೋ ನಮ್ಮ ಮತ್ತು ಅವರ ನಡುವೆ ಭಿನ್ನಾಭಿಪ್ರಾಯ ಬಂತು. ಈ ಗೊಂದಲದಲ್ಲಿ ರಾಜ್ಯದ ಜನರನ್ನು ಒತ್ತೆ ಇಡುವುದು ಬೇಡವೆಂದು, ನಾನು ಜನರ ಮುಂದೆ ಹೋದಂಥದ್ದು, ಜನರು ನಮಗೆ ಆಶೀರ್ವಾದ ಮಾಡಿದಂಥದ್ದು. ನಂತರ ನಾನು ಸುಮಾರು ಮೂರೂಕಾಲು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಆಡಳಿತವನ್ನು ನಡೆಸಿರುವಂಥದ್ದು. ಇದೆಲ್ಲಾ ವಿಚಾರಗಳು ಜನತೆಗೆ ಗೊತ್ತಿರುವಂಥ ಸಂಗತಿಯಾಗಿದೆ. ಈಗ ನನ್ನನ್ನು ಉದ್ದೇಶಪೂರ್ವಕವಾಗಿ, ದುರುದ್ದೇಶದಿಂದ, ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದ ಮೇಲೆ ನಾನು ಕೆ.ಜೆ.ಪಿ.ಪಕ್ಷವನ್ನು ಕಟ್ಟಬೇಕಾಯಿತು. ಇದಕ್ಕೆ ಕಾರಣ ಏನೆಂಬ ವಿಚಾರವನ್ನು ನಂತರ ಹೇಳುತ್ತೇನೆ. ಬಹುಶಃ ರಾಜ್ಯದ ಜನರು ಅವರ ಹೃದಯಗಳಲ್ಲಿ ಒಂದು ಸ್ಥಾನವನ್ನು ಕೊಟ್ಟಿದ್ದಾರೆ. ಸೋಲಿನಲ್ಲೂ ಸಹ ಗೆಲುವಿನ ದಾಖಲೆ ಆಗಿದೆ. ರಾಜಕೀಯ ಅನ್ನುವಂಥದ್ದು ಕಾಯುವಂಥ ಆಟ, Waiting game. ಆದ್ದರಿಂದ, ಇದಕ್ಕೆ ಜಾಣ್ಮೆಯೂ ಬೇಕು ಮತ್ತು ತಾಳ್ಮೆಯೂ ಬೇಕು. ನಮ್ಮನ್ನು

ಬೆಳೆಸಿದಂಥ ಜನರು ದುರ್ಬಿನ್ ಹಾಕಿಕೊಂಡು ನೋಡುತ್ತಿದ್ದಾರೆ. ನಮ್ಮ ನಡೆ–ನುಡಿಗಳ ಬಗ್ಗೆ ಹೆಚ್ಚು ಜಾಗೃತವಾಗಿ ಜನಪರವಾಗಿ ಯೋಚಿಸಬೇಕೆಂಬುದು ಜನರ ಅಪೇಕ್ಷೆ ಇದೆ. ಒಂದು constructive opposition party ಯಾಗಿ ಪ್ರಾಮಾಣಿಕವಾಗಿ ತಾವು ಮಾಡುವಂಥ ಒಳ್ಳೆಯ ಕೆಲಸವನ್ನು ಸ್ವಾಗತ ಮಾಡುತ್ತೇವೆ, ತಪ್ಪಾದಾಗ ರಾಜ್ಯದ ಜನರ ಹಿತದೃಷ್ಟಿಯಿಂದ ಅದನ್ನು ಸರ್ಕಾರದ ಗಮನಕ್ಕೆ ತರುತ್ತಾ ನಮ್ಮ ಕರ್ತವ್ಯವನ್ನು ಮಾಡುತ್ತೇವೆಂಬ ಭರವಸೆಯನ್ನು ಮಾನ್ಯ ಮುಖ್ಯಮಂತ್ರಿಯವರಿಗೆ ಕೊಡುತ್ತಿದ್ದೇನೆ. ಒಂದು ಮಾತು ಏನೆಂದರೆ, ಇದು ಕಾಂಗ್ರೆಸ್‌ಗೆ Positive mandate ಅಲ್ಲ. ವಿಶೇಷವಾದಂಥ ಒಂದು ಸಂದರ್ಭದ ಕಾರಣಕ್ಕಾಗಿ ತಾವು ಅಧಿಕಾರಕ್ಕೆ ಬಂದಿದ್ದೀರಿ, ಸಂತೋಷ. ಯಾರಾದರೂ ಒಬ್ಬರು ಅಧಿಕಾರವನ್ನು ನಡೆಸಲೇ ಬೇಕು, ಇವತ್ತು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಒಂದು ಮಾತನ್ನು ಹೇಳಲಿಚ್ಛಿಸುತ್ತೇನೆ. ತಾವು ಬಹಳ ಅವಸರದಲ್ಲಿದ್ದೀರೆಂದು ನಾನು ಅಂದುಕೊಂಡಿದ್ದೇನೆ. ತಾವು ಸ್ವಲ್ಪ ಶಾಂತ ರೀತಿಯಲ್ಲಿ ತಮ್ಮ ಸುತ್ತಮುತ್ತ ಇರುವಂಥವರ ಬಗ್ಗೆ ಎಚ್ಚರ ವಹಿಸಿ, ಎಲ್ಲರನ್ನೂ ಸಮಾಧಾನ ಮಾಡಿ, ತಮಗೆ ಅಪರೂಪವಾಗಿ ಸಿಕ್ಕಿರುವ ಈ ಅವಕಾಶವನ್ನು ಉಪಯೋಗ ಮಾಡಿಕೊಳ್ಳಿ ಎಂಬ ಕಿವಿ ಮಾತನ್ನು ಹೇಳಲಿಚ್ಛಿಸುತ್ತೇನೆ. ನಾನು ಅದಕ್ಕಿಂತ ಹೆಚ್ಚಿಗೆ ಹೇಳುವ ಅಗತ್ಯವಿಲ್ಲವೆಂದು ತಿಳಿದುಕೊಂಡಿದ್ದೇನೆ. ದೊಡ್ಡವರು ಹೇಳುತ್ತಾರೆ, ಸ್ವಾಮಿ ವಿವೇಕಾನಂದರು ಏನು ಹೇಳಿದ್ದಾರೆಂದರೆ" One battle is not an end of war" ಎಂದು ಹೇಳುತ್ತಾರೆ. ಆದ್ದರಿಂದ ನಾನು ಕೆಲವರನ್ನು ನಂಬಿದೆ, ನಂಬಿದ್ದು ತಪ್ಪಲ್ಲ. ಜಗತ್ತಿನಲ್ಲಿ ಪರಸ್ಪರ ಒಬ್ಬರನ್ನೊಬ್ಬರು ನಂಬಬೇಕಾಗುತ್ತದೆ, ನಂಬದಿದ್ದರೆ ಬದುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ನಂಬಿದವರೇ ಮೋಸ ಮಾಡಿದಾಗ, ಅದು ಅವರ ತಪ್ಪು. ಅದನ್ನು ಜನರು ನೋಡುತ್ತಾರೆ. ಅದರ ಬಗ್ಗೆ ನಾನು ಚಿಂತೆ ಮಾಡುವುದಿಲ್ಲ. ಆದರೆ ಕೆ.ಜೆ.ಪಿ. ಪಕ್ಷವನ್ನು ಕಟ್ಟುವಂಥ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡಿದ್ದೇನೆ. ನಾನು ಒಂದು ತಾತ್ವಿಕ ನೆಲೆಯಲ್ಲಿ ಈ ಪ್ರಾದೇಶಿಕ ಪಕ್ಷವನ್ನು ಕಟ್ಟುತ್ತಿರುವಂಥದ್ದು. ರಾಜಕಾರಣ ಏನು ನಿಂತ ನೀರಲ್ಲ, ಮುಂಬರುವ ದಿವಸಗಳಲ್ಲಿ ರಾಜ್ಯದ ರಾಜಕಾರಣದಲ್ಲಿ, ರಾಷ್ಟ್ರದ ರಾಜಕಾರಣದಲ್ಲಿ ಅನೇಕ ರೀತಿಯ ಬದಲಾವಣೆಗಳಾಗುವ ಸಂದರ್ಭಗಳಿರುವುದರಿಂದ ಯಾವುದೇ ಕಾರಣಕ್ಕೂ ನಾವು ನಿರಾಶೆಯಾಗದೇ, ಧೃತಿಗೆಡದೇ ಧೈರ್ಯವಾಗಿ ಕೆ.ಜಿ.ಪಿ.ಪಕ್ಷವನ್ನು

ಕಟ್ಟುವಂಥ ಪ್ರಯತ್ನ ಮಾಡುವುದರಲ್ಲಿ ನಾವು ಮುನ್ನಡೆಯುತ್ತಿದ್ದೇವೆ. ನಾವು ಮೊನ್ನೆ ನಡೆದಂಥ ಚುನಾವಣೆಯ ಫಲಿತಾಂಶವನ್ನು ನೋಡಿದಾಗ ಕೆ.ಜೆ.ಪಿ.ಪಕ್ಷ ರಚನೆಯಾಗಿ ನಾಲ್ಕು ತಿಂಗಳು ಆಗಿದೆ ಈ ಪಕ್ಷದ Symbol ಯಾರಿಗೂ ಪರಿಚಯವಿಲ್ಲ, ಅಧ್ಯಕ್ಷರ ಗೊಂದಲ, ಕೋರ್ಟ್‌ನಲ್ಲಿ ಕೇಸ್ ನಡೆಯುತ್ತಿತ್ತು. ಚುನಾವಣೆ ಘೋಷಣೆಯಾಗುವವರೆಗೂ Symbol ಕೊಡಲಿಲ್ಲ. ನಮ್ಮದು recognized opposition party ಅವತ್ತು ಅಲ್ಲದೇ ಇದ್ದುದ್ದರಿಂದ 14–15 ಕಡೆಗಳಲ್ಲಿ ಸ್ಪರ್ಧೆ ಮಾಡುವ ಕಡೆಗಳಲ್ಲಿ ಎಲ್ಲೋ ಒಂದು ಕಡೆ ನಮ್ಮ ಅಭ್ಯರ್ಥಿಗಳ ಹೆಸರು ಇರುತ್ತಿತ್ತು. ನಮ್ಮ ಪಕ್ಷದ ತೆಂಗಿನಕಾಯಿ ಗುರುತನ್ನು ಪರಿಚಯ ಮಾಡಿಕೊಡುವುದಕ್ಕೆ ಆಗಲಿಲ್ಲ. ಇಂಥ ಒಂದು ಸಂದರ್ಭದಲ್ಲಿ ಚುನಾವಣೆಯಾದಾಗ ನಾವು 10% ಓಟುಗಳನ್ನು ತೆಗೆದುಕೊಂಡೆವು, ಅಧಿಕಾರದಲ್ಲಿದ್ದ ಬಿ.ಜೆ.ಪಿ.ಯವರು 19.97% ಓಟುಗಳನ್ನು ತೆಗೆದುಕೊಂಡರು, ಜೆಡಿ(ಎಸ್)ನವರು 20.09% ಓಟುಗಳನ್ನು ತೆಗೆದುಕೊಂಡರು, ಬಿಎಸ್‌ಆರ್ ಪಕ್ಷದವರು 2.62% ತೆಗೆದುಕೊಂಡರು, ತಾವು 36.55% ಓಟುಗಳನ್ನು ತೆಗೆದುಕೊಂಡಿದ್ದೀರಿ. ಅಂದರೆ ಈ ಓಟಿನ ಅಂಕಿ–ಅಂಶಗಳನ್ನು ನೋಡಿದಾಗ, ತಾವು ಗೆದ್ದಿರಬಹುದು, ಅಧಿಕಾರಕ್ಕೆ ಬಂದಿರಬಹುದು. ಆದರೆ ಈ ಕಡೆಯಲ್ಲಿ ಕುಳಿತಿರುವಂಥ ನಾವೆಲ್ಲಾ ಒಟ್ಟಾಗಿ ಸೇರಿದರೆ ಮುವತ್ತಾರೂವರೆ ಪರ್ಸೆಂಟ್ ಅಲ್ಲದೇ ಉಳಿದೆಲ್ಲಾ ಓಟುಗಳನ್ನು ಜನರು ವಿರೋಧಪಕ್ಷದವರಿಗೆ ಹಾಕಿದ್ದಾರೆಂಬುದನ್ನು ತಾವು ಮನಗಂಡು, ಪ್ರತಿಪಕ್ಷಗಳ ಮಾತಿಗೂ ಸಹ ಕಿವಿಗೊಟ್ಟು, ಗೌರವವನ್ನು ಕೊಟ್ಟು ನಮ್ಮ ಮಾತಿಗೆ ತಾವು ಮನ್ನಣೆ ಕೊಡಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ವಿನಂತಿಯನ್ನು ಮಾಡುತ್ತೇನೆ. ನಾವು 35 ಕ್ಷೇತ್ರದಲ್ಲಿ ಎರಡನೇ ಸ್ಥಾನದಲ್ಲಿ ಬಂದೆವು, 39 ಕ್ಷೇತ್ರಗಳಲ್ಲಿ ಮೂರನೇ ಸ್ಥಾನದಲ್ಲಿ ಬಂದೆವು, 1,000, 1,500 ಓಟಿನ ಕೆಳಗಡೆ 7–8 ಸ್ಥಾನಗಳನ್ನು ಕಳೆದುಕೊಂಡೆವು. ಇಲ್ಲಿ ಬಿ.ಜೆ.ಪಿ. ಮತ್ತು ಕೆ.ಜೆ.ಪಿ. ಪಕ್ಷಗಳ ಮತಗಳನ್ನು ಸೇರಿಸಿದರೆ, ಸುಮಾರು 27–28 ಕಡೆಗಳಲ್ಲಿ ನಾವು ಗೆಲ್ಲುತ್ತಿದ್ದೆವು. ಅಂದರೆ ನಿಮಗೆ ಅಷ್ಟು ಸಂಖ್ಯೆಗಳು ಕಡಿಮೆಯಾಗುತ್ತಿತ್ತು. ಅದಕ್ಕೆ ನಾನು The Hindu ಪತ್ರಿಕೆಯಲ್ಲಿ ಪ್ರಕಟವಾದಂತಹ cartoon ಅನ್ನು ತಮಗೆ ನೆನಪು ಮಾಡಿಕೊಡುವ ಪ್ರಯತ್ನ ಮಾಡಿದಂಥದ್ದು ಎಂದರೆ, ಒಂದು ವಿಶೇಷವಾದ ಕಾರಣಕ್ಕಾಗಿ ತಾವು ಅಧಿಕಾರಕ್ಕೆ ಬಂದಿದ್ದೀರಿ. ತಾವು ಅದರ ಉಪಯೋಗ

ಮಾಡಿಕೊಳ್ಳಬೇಕೆನ್ನುವಂಥದ್ದು. ತಮಗೆ ಗೊತ್ತಿದೆ, ಮಧ್ಯ ಕರ್ನಾಟಕದಲ್ಲಿ ನಮಗೆ 18.44% ಓಟು ಬಂತು, ಹೈದರಾಬಾದ್ ಕರ್ನಾಟಕದಲ್ಲಿ 14.52% ಓಟು ಬಂತು, ಮುಂಬೈ ಕರ್ನಾಟಕದಲ್ಲಿ 10.41% ಓಟು ಬಂತು. ಹೊಸದಾಗಿ ಪಕ್ಷವನ್ನು ಕಟ್ಟುವಂಥ ಸಂದರ್ಭದಲ್ಲಿ ಸ್ವಲ್ಪ ಹಿನ್ನಡೆಯಾಗಿರಬಹುದು. ನಾನು ಈ ಮನೆಯಲ್ಲಿ ಭರವಸೆ ಕೊಡುವುದೇನೆಂದರೆ, ಪ್ರಾಮಾಣಿಕವಾಗಿ ನಾವು ಜನರಿಗೆ ಭರವಸೆಯನ್ನು ಕೊಟ್ಟು ಒಂದು ಪ್ರಾದೇಶಿಕ ಪಕ್ಷವನ್ನು ಕಟ್ಟುತ್ತೇವೆಂದು ಹೇಳಿದ್ದೇವೆ. ಒಂದು Third Front ಬಗ್ಗೆ ನನ್ನದೇನು ಒಂದು ಚಿಂತನೆ ಇದೆ, ಆ ದಿಕ್ಕಿನಲ್ಲಿ ಈ ಸಂಘಟನೆಯನ್ನು ಕರ್ನಾಟಕದಲ್ಲಿ ಬೆಳೆಸುವುದಕ್ಕೆ, ಕೆ.ಜೆ.ಪಿ.ಪಕ್ಷವನ್ನು ಕಟ್ಟುವುದಕ್ಕೆ ನಾನು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆ. ಏಕೆಂದರೆ, Electronic Mediaದಲ್ಲಿ Print Mediaದಲ್ಲಿ ಬಹುಶಃ ಯಡಿಯೂರಪ್ಪನ ಹೆಸರು ಇಲ್ಲದೇ ಯಾವುದೇ ಚರ್ಚೆಯೂ ಪ್ರಾರಂಭವಾಗುವುದಿಲ್ಲ. ಒಂದು ರೀತಿಯಲ್ಲಿ ವ್ಯವಸ್ಥಿತವಾಗಿ ಗೊಂದಲವನ್ನುಂಟು ಮಾಡುವಂಥ ಷಡ್ಯಂತ್ರವೋ, ಪಿತೂರಿಯೋ ನನಗೆ ಗೊತ್ತಿಲ್ಲ. ಆದರೆ ನಾನಂತೂ ದೃಢವಾಗಿ ಜನರನ್ನು ನಂಬಿ ನನ್ನದೇ ಆದಂಥ ರೀತಿಯಲ್ಲಿ ರಾಜಕಾರಣವನ್ನು ಬರುವ ದಿವಸಗಳಲ್ಲಿ ಮಾಡಬೇಕೆಂದು ಹೊರಡಿದ್ದೇನೆ. ಈಗಾಗಲೇ ನಾನು ಮುಖ್ಯಮಂತ್ರಿಯಾಗಿದ್ದೆ, ಉಪ ಮುಖ್ಯಮಂತ್ರಿಯಾಗಿದ್ದೆ, ತಾವು ಶಿವಮೊಗ್ಗ ಜಿಲ್ಲೆಯಿಂದ ಬಂದಂಥವರು. ನಾನು ಒಬ್ಬ ಸಾಮಾನ್ಯ ರೈತನ ಮಗ, ಒಬ್ಬ ಪುರಸಭಾ ಸದಸ್ಯನಾಗಿದ್ದವನು, ನನ್ನಂಥ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಕರ್ನಾಟಕ ರಾಜ್ಯದ ಜನರು ಆಶೀರ್ವಾದವನ್ನು ಮಾಡಿ, ಉಪ ಮುಖ್ಯಮಂತ್ರಿಯನ್ನಾಗಿ ಮಾಡಿ, ಮುಖ್ಯಮಂತ್ರಿಯನ್ನಾಗಿ ಮಾಡಿದ ಮೇಲೆ, ಶಾಶ್ವತವಾಗಿ ಮುಖ್ಯಮಂತ್ರಿಯಾಗಿರುವುದಕ್ಕೆ ಆಗುವುದಿಲ್ಲ. ಶಾಶ್ವತವಾಗಿ ಅಧಿಕಾರದಲ್ಲಿರುವುದಕ್ಕೆ ಆಗುವುದಿಲ್ಲ. ಈ ಭಾಗದ ಕಾಂಗ್ರೆಸ್ ಸ್ನೇಹಿತರನ್ನು ನೋಡಿದಾಗ ನಮಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕೆನಿಸುತ್ತದೆ. ಮೂರ್ನಾಲ್ಕು ಚುನಾವಣೆಗಳಲ್ಲಿ ಸೋತ ಮೇಲೂ ಸಹ ಗಟ್ಟಿಯಾಗಿ ಆ ಪಕ್ಷದಲ್ಲಿ ಇದ್ದು ಗೆದ್ದು ಬಂದಿರುವ ಹೊಸ ಮುಖಗಳನ್ನು ನೋಡುತ್ತಿದ್ದೇನೆ, ಅವತ್ತು ಹಳಬರಿದ್ದರು. ಇಲ್ಲಿ ಬಹಳ ಜನರು ಹೊಸಬರು ಆಯ್ಕೆಯಾಗಿ ಬಂದಿದ್ದಾರೆ. ಅವರಿಗೆ ಸರಿಯಾದಂಥ ಮೇಲ್ಪಂಕ್ತಿಯನ್ನು ಹಾಕಿಕೊಡುವ ಪ್ರಯತ್ನವನ್ನು ನಾವು ಮಾಡಬೇಕಾಗಿದೆ. ಒಂದು ನೋವಿನ ಮಾತು ಎಂದರೆ, ರಾಜ್ಯಪಾಲರಿಂದ ಇಷ್ಟು

ಅವಸರವಾಗಿ ಕಳೆದ ಕೆಲವು ವರ್ಷಗಳಲ್ಲಿ ಕಂಡುಬಂದ ಭ್ರಷ್ಟಾಚಾರದ ಹಗರಣಗಳಿಂದಾಗಿ ದೇಶದ ಎದುರು ಕರ್ನಾಟಕ ತಲೆ ತಗ್ಗಿಸುವಂತಾಗಿದೆ. ಸಾರ್ವಜನಿಕರ ಹಣ ಪೋಲಾಗಿ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿವೆ ಎಂದು ತಾವು ರಾಜ್ಯಪಾಲರ ಮುಖಾಂತರ ಹೇಳಿಸುವಂಥ ಪ್ರಯತ್ನವನ್ನು ಮಾಡಿದ್ದೀರಿ. ಈ ಹಿಂದೆ ಕಳೆದ 40 ವರ್ಷಗಳ ನನ್ನ ಅನುಭವದಲ್ಲಿ ಕಳೆದ 18–20 ವರ್ಷಗಳು ಈ ಮನೆಯ ಸದಸ್ಯನಾಗಿ ಏಳನೇ ಬಾರಿ ಆಯ್ಕೆಯಾಗಿ ಬಂದಿರುವಂಥ ಸಂದರ್ಭದಲ್ಲಿ ಹೊಸ ಸರ್ಕಾರ ಬಂದಾಗ ಈ ರೀತಿ ರಾಜ್ಯಪಾಲರಿಂದ ಹಿಂದಿನ ಸರ್ಕಾರವನ್ನು ಅವಹೇಳನ ಮಾಡುವಂಥದು, ಈ ರೀತಿ ಗುರುತರವಾದ ಆರೋಪವನ್ನು ಮಾಡುವಂಥ ಪ್ರಯತ್ನವನ್ನು ಮಾಡಿರಲಿಲ್ಲ. ಸದನದಲ್ಲಿ ಚರ್ಚೆ ಸಂದರ್ಭದಲ್ಲಿ ನಿಮಗೆ ಸ್ವಾತಂತ್ರ್ಯವಿದೆ. ಎಲ್ಲವನ್ನೂ ಕೆದಕಿ ಹಿಂದಿನ ಸರ್ಕಾರದ ಲೋಪದೋಷಗಳನ್ನು ಮಾತನಾಡುವುದಕ್ಕೆ ನಿಮಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಇವತ್ತು ನಾನು ತಮ್ಮ ಬಗ್ಗೆ ಏನೂ ಮಾತನಾಡುವುದಿಲ್ಲ. ಏಕೆಂದರೆ, ತಾವು ಬಜೆಟ್ ಮಂಡನೆ ಮಾಡಿದ ಮೇಲೆ ಯಾವ ದಿಕ್ಕಿನಲ್ಲಿ ಹೊರಡಿದ್ದೀರಿ, ಕಾರ್ಯಕ್ರಮಗಳು ಹೇಗಿದೆಯೆಂಬುದನ್ನು ನೋಡಿ ಮಾತನಾಡಬೇಕೆ ಹೊರತು, ತಾವು ಬಂದು ಇನ್ನೂ ಒಂದು ತಿಂಗಳು ಆಗಿಲ್ಲ, ಈಗಲೇ ನಾವು ತಮ್ಮನ್ನು ಟೀಕೆ ಮಾತನಾಡುವುದಕ್ಕೆ ಇಚ್ಛಿಸುವುದಿಲ್ಲ. ನಾವು ಏನು ಮಾಡಿದೆವು? ನಮ್ಮ ಸಾಧನೆ ಏನಿತ್ತು? ಇದನ್ನು ಮಾತ್ರ ನಾನು ಹೇಳಲಿಚ್ಛಿಸುತ್ತೇನೆ. ಆದರೆ ಗಾಜಿನ ಮನೆಯಲ್ಲಿ ಕುಳಿತು ಕಲ್ಲು ಹೊಡೆಯುವಂಥ ಕೆಲಸವನ್ನು ಸನ್ಮಾನ್ಯ ಮುಖ್ಯಮಂತ್ರಿಯವರೆ, ತಾವು ಮಾಡಬೇಡಿ. ಈಗಾಗಲೇ ಮಾನ್ಯ ಸಿದ್ದರಾಮಯ್ಯನವರ ನಡವಳಿಕೆ ಬಗ್ಗೆ ನಿಮ್ಮ ಪಕ್ಷದಲ್ಲಿ ಬಹಿರಂಗವಾಗಿ ಭಿನ್ನಾಭಿಪ್ರಾಯಗಳು ಶುರುವಾಗಿದೆ, ಚರ್ಚೆಗಳು ಆಗುತ್ತಿವೆ. ಅದು ಯಾವಾಗ ಬೇಕಾದರೂ ಸ್ಫೋಟವಾಗಬಹುದೆನ್ನುವ ಅನುಮಾನವಿದೆ. ಒಂದು ರೀತಿಯಲ್ಲಿ ಬೂದಿ ಮುಚ್ಚಿದ ಕೆಂಡದಂಥ ವಾತಾವರಣವಿರುವುದರಿಂದ ಇದೆಲ್ಲವನ್ನೂ ನಾವು ಶಾಂತ ರೀತಿಯಲ್ಲಿ ಗಮನಿಸುತ್ತೇವೆ. ಜನರು ಕಾಲ ಬಂದಾಗ ಉತ್ತರವನ್ನು ಕೊಡುತ್ತಾರೆ. ಸದ್ಯದಲ್ಲೇ ಲೋಕಸಭೆಯ ಚುನಾವಣೆ ಬರುವುದಿದೆ, ದೇಶದ ರಾಜಕಾರಣದಲ್ಲಿ ಆನೇಕ ರೀತಿಯ ಬದಲಾವಣೆಗಳಾಗುವಂಥದ್ದು ಇದೆ. ಏನಾಗುತ್ತದೆ ಎಂದು ನೋಡೋಣ. ಒಂದು ಮಾತು ಹೇಳುವುದಾದರೆ ತಾವು

ಸುಮಾರು 98 ಲಕ್ಷ ಬಿ.ಪಿ.ಎಲ್. ಕಾರ್ಡುದಾರರಿಗೆ ಒಂದು ಕೆ.ಜಿ.ಗೆ ಒಂದು ರೂಪಾಯಿಯಂತೆ 30 ಕೆ.ಜಿ. ಅಕ್ಕಿಯನ್ನು ಕೊಡುವುದಕ್ಕೆ ಹೊರಟಿದ್ದೀರಿ. ಬಹಳ ಸಂತೋಷ. ತಾವು ಕೇಂದ್ರ ಸರ್ಕಾರದ ಆಹಾರ ಸಚಿವರನ್ನು ಭೇಟಿ ಮಾಡಿ ಬಂದಿದ್ದೀರಿ. ಅದರಲ್ಲಿ ನೀವೇನಾದರೂ ಯಶಸ್ವಿಯಾದರೆ, ನಾವು ಕರ್ನಾಟಕದವರು ಅಷ್ಟೇ ಅಲ್ಲ, ದೇಶದ ಎಲ್ಲಾ ರಾಜ್ಯದವರೂ ಸಹ ಬಂದು ನಿಮಗೆ ಅಭಿನಂದನೆ ಸಲ್ಲಿಸುತ್ತಾರೆ. ಒಂದು ಸಾರಿ ಒಂದು ಕೆ.ಜಿ.ಗೆ ಒಂದು ರೂಪಾಯಿಯಂತೆ ಕೇಂದ್ರ ಸರ್ಕಾರ ಸಹಾಯ ಮಾಡಿ ಅಕ್ಕಿ ಕೊಟ್ಟರೆ ದೇಶದ ಎಲ್ಲಾ ರಾಜ್ಯಗಳಿಗೂ ಅದರಿಂದ ಅನುಕೂಲವಾಗುತ್ತದೆ. ಸಹಜವಾಗಿ ಬೇರೆ ಬೇರೆ ರಾಜ್ಯದವರೂ ಸಹ ಅದರ ಉಪಯೋಗವನ್ನು ಮಾಡಿಕೊಳ್ಳಬಹುದು. ಬಡವರಿಗೆ 30 ಕೆ.ಜಿ. ಅಕ್ಕಿ ಕೊಡುವ ಕೆಲಸದಲ್ಲಿ ನೀವು ಯಶಸ್ವಿಯಾದರೆ ಖಂಡಿತ ಬೇರೆ ಬೇರೆ ರಾಜ್ಯದ ಮುಖ್ಯಮಂತ್ರಿಗಳು ನಿಮ್ಮನ್ನು ಕೊಂಡಾಡುತ್ತಾರೆ. ಕೇಂದ್ರದಲ್ಲಿ ನಿಮ್ಮದೇ ಸರ್ಕಾರ ಇದೆ. ಈಗ ಪಾರ್ಲಿಮೆಂಟ್ ಚುನಾವಣೆ ಕೂಡ ಹತ್ತಿರ ಬರುತ್ತಿದೆ. ಹೀಗಾಗಿ ನೀವು ಅದರಲ್ಲಿ ಯಶಸ್ವಿಯಾಗಿ. ಆದರೆ ಒಂದು ವಿಚಾರ ಏನೆಂದರೆ ನೀವು ಅದನ್ನು ಅವಸರದಲ್ಲಿ ಏಕೆ ಮಾಡಿದಿರಿ? ಜೂನ್ ಒಂದನೇ ತಾರೀಖಿನಿಂದ ಮಾಡುತ್ತೇನೆಂದು ಘೋಷಣೆ ಮಾಡಿದಿರಿ. ಹಾಗಾದರೆ ನಿಮ್ಮಲ್ಲಿ ಅಕ್ಕಿ stock ಇತ್ತೇ? ನಿಮಗೆ ಕೇಂದ್ರ ಭರವಸೆ ಕೊಟ್ಟಿತ್ತೇ? First cabinetನಲ್ಲಿ ಅಷ್ಟು ತರಾತುರಿಯಲ್ಲಿ ಅನೌಪಚಾರಿಕವಾದಂತಹ ತೀರ್ಮಾನವನ್ನು ಏಕೆ ತೆಗೆದುಕೊಂಡಿರಿ? ಈಗ ಜೂನ್ ತಿಂಗಳು ಆಯಿತು, ನೀವು ಜುಲೈ firstನಿಂದ ಕೊಡುತ್ತೇವೆಂದು ಹೇಳಿದ್ದೀರಿ. ಕೇಂದ್ರ ಸರ್ಕಾರ ಅಕ್ಕಿ ಕೊಟ್ಟಿಲ್ಲ. ನೀವು alternative ವ್ಯವಸ್ಥೆ ಮಾಡಿಕೊಳ್ಳಿ. ನಾನು ಇಷ್ಟೇ ವಿನಂತಿ ಮಾಡಿಕೊಳ್ಳುವುದು, ದಯಮಾಡಿ ಈ ಪರಿಸ್ಥಿತಿಯಲ್ಲಿ ಕೇಂದ್ರವನ್ನು ನಂಬಿಕೊಂಡು ಜುಲೈ ಒಂದರಿಂದ ಅಕ್ಕಿ ಕೊಡುತ್ತೇವೆಂದು ನೀವು ಹೇಳಿದರೆ ರಾಜ್ಯದ ಜನ ನಿಮ್ಮನ್ನು ನಂಬುವುದಿಲ್ಲ. ಜನ ಒಂದು ಬಾರಿ ನಂಬಬಹುದು. ಯಾವುದೋ ವಿಶೇಷ ಕಾರಣಕ್ಕಾಗಿ ಜೂನ್ ಒಂದನೇ ತಾರೀಖಿನಿಂದ ಕೊಡುವುದಕ್ಕೆ ಆಗಿಲ್ಲ, ಜುಲೈ ಒಂದರಿಂದ ಕೊಡುತ್ತಾರೆಂದು ಜನ ಶಾಂತವಾಗಿದ್ದಾರೆ. ನೀವು ಪ್ರತಿಪಕ್ಷಗಳನ್ನು ಕರೆದು ಬೀದಿಗಿಳಿದು ಪ್ರಾರಂಭದಲ್ಲಿ ಹೋರಾಟ ಮಾಡುವುದಕ್ಕೆ ನಮಗೆ ಅವಕಾಶ ಮಾಡದ ರೀತಿಯಲ್ಲಿ alternative ವ್ಯವಸ್ಥೆಯನ್ನು ಮಾಡಿಕೊಂಡು ಜುಲೈ ಒಂದನೇ

ತಾರೀಖಿನಿಂದಲಾರೂ ಒಂದು ಕೆ.ಜಿ. ಅಕ್ಕಿಗೆ ಒಂದು ರೂಪಾಯಿಯಂತೆ 30 ಕೆ.ಜಿ. ಅಕ್ಕಿಯನ್ನು ತಾವು ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು ಮತ್ತು ಯಶಸ್ವಿಯಾಗಬೇಕೆಂದು ವಿನಂತಿಯನ್ನು ಮಾಡುತ್ತೇನೆ. ಹಾಲು ಉತ್ಪಾದಕರಿಗೆ ಸಹಾಯಧನ ಎರಡು ರೂಪಾಯಿಯಂತೆ ನಾನು ಮಾಡಿದ್ದನ್ನು ನೀವು ಅದನ್ನು ನಾಲ್ಕು ರೂಪಾಯಿ ಎಂದು ಮಾಡಿದ್ದೀರಿ. ಬಹಳ ಸಂತೋಷ, ರೈತರಿಗೆ ಅನುಕೂಲ ಮಾಡಿ ಕೊಡಬೇಕು. ಈ ದೇಶಕ್ಕೆ ಅನ್ನ ಕೊಡುವಂತಹ ಅನ್ನದಾತನಿಗೆ ಎಷ್ಟು ಮಾಡಿದರೂ ಕೂಡ ಕಡಿಮೆಯೇ. ಮಾನ್ಯ ಮುಖ್ಯಮಂತ್ರಿಗಳು ತಾವು ರೈತ ಕುಟುಂಬದ ಹಿನ್ನೆಲೆಯಿಂದ ಬಂದಿರುವವರು. ಇವತ್ತು ರೈತ ಯಾವ ಪರಿಸ್ಥಿತಿಯಲ್ಲಿದ್ದಾನೆ ಎಂದು ನಿಮಗೆಲ್ಲಾ ಗೊತ್ತಿರುವ ಸಂಗತಿ. ಇವತ್ತಿಗೂ ಅವನು ಸಾಲಗಾರ. ಇವತ್ತು ಅವನು ಸಾಲ ತೆಗೆದುಕೊಂಡು ಬಂದೇ ಜೀವನ ಮಾಡಬೇಕು, ಸಾಲ ತೆಗೆದುಕೊಂಡೇ ಮದುವೆ, ಮುಂಜಿ ಮಾಡಬೇಕು. ಈ ಪರಿಸ್ಥಿತಿಯಲ್ಲಿ ಎರಡು ರೂಪಾಯಿ ಇರುವುದನ್ನು ನಾಲ್ಕು ರೂಪಾಯಿ ಮಾಡಿದಾಗ ಸಹಜವಾಗಿ 25–26 ಲಕ್ಷ ಲೀಟರ್ ಇದ್ದದ್ದು, 55–56 ಲಕ್ಷ ಲೀಟರ್ ಆಯಿತು. ಈಗ ಅದು 65 ಲಕ್ಷ ಲೀಟರ್ ದಾಟಬಹುದು. ನಿಮಗೆ ಗೊತ್ತಿರುವ ಹಾಗೆ ಹಾಲಿನ ಪುಡಿಗೆ demand ಇಲ್ಲ. ಹಾಲಿನ ಪುಡಿಯನ್ನು ಕೊಳ್ಳುವವರಿಲ್ಲ. ನೀವು ಈಗಾಗಲೇ ಮಕ್ಕಳಿಗೆ ಹಾಲು ಕೊಡುವುದರ ಬಗ್ಗೆ alternative ಯೋಚನೆ ಮಾಡಿದ್ದೀರಿ. ಹಾಲಿಗೆ ನೀವು ಎರಡು ರೂಪಾಯಿ ಕೊಡುವ ಬದಲು ನಾಲ್ಕು ರೂಪಾಯಿ ಕೊಡುವಂತಹ ಈ ಸಂದರ್ಭದಲ್ಲಿ ಮಳೆಗಾಲದಲ್ಲಿ 65 ರಿಂದ 70 ಲಕ್ಷ ಲೀಟರ್ ಹಾಲು ಬಂದರೆ ನೀವು ಆಶ್ಚರ್ಯ ಪಡಬೇಡಿ. ಆ ರೀತಿ ಹಾಲು ಬಂದಾಗ ನೀವು ಅದನ್ನು ಹೇಗೆ ವಿತರಣೆ ಮಾಡುತ್ತೀರಿ? KMF ಮುಚ್ಚದ ರೀತಿಯಲ್ಲಿ ಲಾಭದಾಯಕವಾಗಿ ನಡೆಯುವುದಕ್ಕೆ ನೀವೇನು ಮಾಡುತ್ತೀರಿ? ಇದರ ಬಗ್ಗೆ ಈಗಲೇ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು. ಏಕೆಂದರೆ ನೀವು ತಪ್ಪು ಮಾಡದಿರುವಾಗ ನಾವು ಹೋರಾಟ ಮಾಡುವಂತಹ ಅಗತ್ಯವಿಲ್ಲ. ಜನರಿಗೆ ನ್ಯಾಯ ಸಿಗಬೇಕು, ಇದರ ಬಗ್ಗೆ ನೀವು ಮುಂದಾಲೋಚನೆ ಮಾಡಬೇಕೆಂದು ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ವಸತಿ ಯೋಜನೆಗೆ ತಾವು ಸಹಾಯಧನ ಎಂದು 45,000 ರೂಪಾಯಿ ಕೊಡುತ್ತಿದ್ದೀರಿ ತಮಗೆ ಗೊತ್ತಿದೆ. ಶ್ರೀಮಂತರ ಮನೆಯಲ್ಲಿ ಒಂದು ಶೌಚಾಲಯ ಕಟ್ಟಿಕೊಳ್ಳುವುದಕ್ಕೆ 6–7 ಲಕ್ಷ ರೂಪಾಯಿ ಖರ್ಚು ಮಾಡುತ್ತಾರೆ. ಬಡತನದ

ಬೇಗೆಯಲ್ಲಿರುವಂತಹ ಬಡವರಿಗೆ ಕೊಡುತ್ತಿದ್ದಂತಹ ಹಣ ನಿಜವಾಗಲೂ ನಾವು ಮಾಡುತ್ತಿದ್ದಂತಹ ಅಪರಾಧ. ನಾವು ಅದರ ಬಗ್ಗೆ ಮುಂಜಾಗ್ರತೆಯಿಂದ ಯೋಚನೆಯನ್ನು ಮಾಡಿದ್ದು, ನಮ್ಮ ಸ್ನೇಹಿತರು ಐದು ವರ್ಷದ ಪೂರ್ಣ ಅವಧಿ ಇರುವುದಕ್ಕೆ ಬಿಟ್ಟಿದ್ದಿದ್ದರೆ ಅದು ಬೇರೆ ಆಗುತ್ತಿತ್ತು. ಬಹುಶಃ ಅದನ್ನು ನಿಮ್ಮ ಕೈಯಿಂದ ಮಾಡಿಸಬೇಕೆಂದು ಭಗವಂತಹ ಇಚ್ಛೆಯಿದ್ದರೆ ಏನು ಮಾಡುವುದಕ್ಕಾಗುತ್ತದೆ? ಈಗ ನೀವೇನು ರೂ.45,000 ಜಾಸ್ತಿ ಮಾಡಿದ್ದೀರಿ, ಇದು ತುಂಬಾ ಸ್ವಾಗತಾರ್ಹ ಸಂಗತಿ. ಬರುವಂತಹ ದಿವಸಗಳಲ್ಲಿ ಇನ್ನೂ ಹೆಚ್ಚು ಮಾಡೋಣ. ಅವರಿಗೆ ಗಟ್ಟಿಯಾದಂತಹ ಮನೆಯನ್ನು ಕಟ್ಟಿಸಿಕೊಡೋಣ. ಮನೆಗಳನ್ನು ಕಡಿಮೆ ಕಟ್ಟಿದರೂ ಪರವಾಗಿಲ್ಲ ಶಾಶ್ವತವಾಗಿರುವಂತಹ ವ್ಯವಸ್ಥೆ ಮಾಡಬೇಕು. ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಭಾಗ್ಯಲಕ್ಷ್ಮಿ, ಭಾಗ್ಯಜ್ಯೋತಿ ಯೋಜನೆಗಳ ಮೂಲಕ ಫಲಾನುಭವಿಗಳಿಗೆ ಕೊಟ್ಟಿರುವಂತಹ ಸವಲತ್ತುಗಳನ್ನು ನೀವು ಲೋಕಸಭೆ ಚುನಾವಣೆಯನ್ನು ಕಣ್ಮುಂದೆ ಇಟ್ಟುಕೊಂಡು ತರಾತುರಿಯಲ್ಲಿ ಮಾಡಿದ್ದರೂ ಸಹ ಬಹಳ ಒಳ್ಳೆಯ ಕೆಲಸ ಮಾಡಿದ್ದೀರೆಂದು ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ನೀವು ಹಣಕಾಸಿನ ಪರಿಸ್ಥಿತಿ ಬಗ್ಗೆ ಮಾತನಾಡಿದಿರಿ. ಸನ್ಮಾನ್ಯ ಮುಖ್ಯಮಂತ್ರಿಗಳು, ವಿರೋಧ ಪಕ್ಷದ ನಾಯಕರಾಗಿದ್ದಿರಿ ಹಾಗೂ ಹಣಕಾಸಿನ ಸಚಿವರೂ ಕೂಡ ಆಗಿದ್ದಿರಿ. ನಾನು ನಿಮ್ಮನ್ನು ಕೇಳುತ್ತೇನೆ. ಈ ದೇಶದ ಇತಿಹಾಸದಲ್ಲಿ ಯಾರಾದರೂ ಒಬ್ಬ ಮುಖ್ಯಮಂತ್ರಿ ಅಧಿಕಾರಕ್ಕೆ ಬಂದ 24 ಗಂಟೆಯೊಳಗಾಗಿ 6,000 ಕೋಟಿ ರೂಪಾಯಿ ಯೋಜನೆಗಳ ಕಾರ್ಯಕ್ರಮಗಳನ್ನು ಏನು ಘೋಷಣೆ ಮಾಡಿದ್ದೀರಿ, ನಿಮ್ಮ ಹಣಕಾಸಿನ ಸ್ಥಿತಿ ಸರಿಯಿಲ್ಲದಿದ್ದರೆ ನೀವು ಘೋಷಣೆ ಮಾಡುವುದಕ್ಕೆ ಸಾಧ್ಯ ಆಗುತ್ತಿತ್ತೇನು? ಚುನಾವಣೆ ಬಂತು. ಮೂರ್ನಾಲ್ಕು ತಿಂಗಳು ಏನೂ ಅಭಿವೃದ್ಧಿ ಕಾರ್ಯಗಳಾಗಲಿಲ್ಲ. ಬೊಕ್ಕಸದಲ್ಲಿ ಹಣ ಇದೆ. ಅದಕ್ಕಾಗಿ ನೀವು ಈ ಕಾರ್ಯಕ್ರಮಗಳನ್ನು ತೆಗೆದುಕೊಂಡಿರುವುದಕ್ಕೆ ನಾವು ಸ್ವಾಗತ ಮಾಡುತ್ತೇವೆ. ಆದರೆ ಹಣಕಾಸಿನ ಪರಿಸ್ಥಿತಿ ಸರಿಯಿಲ್ಲವೆಂದು ತಾವು ಹೇಳುವುದು ನಿಮ್ಮ ಬಾಯಿಂದ ಬರುವಂಥದ್ದಲ್ಲ. ಒಬ್ಬ ಹಣಕಾಸಿನ ಸಚಿವರಾಗಿ ಏಳು ಬಾರಿ ಬಜೆಟ್ ಮಂಡನೆ ಮಾಡಿದಂತಹ ತಾವು ಇನ್ನೂ ಪ್ರಾರಂಭದಲ್ಲೇ ಹಿಂದಿನ ಅಧಿಕಾರದಲ್ಲಿದ್ದಂತಹ ಪಕ್ಷವನ್ನು ಬೆಟ್ಟು ಮಾಡಿ ತೋರಿಸಿ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂತಹ ಪ್ರಯತ್ನವನ್ನು ನೀವೇನು ಮಾಡುತ್ತಿದ್ದೀರಿ, ಇದು ಅಕ್ಷಮ್ಯ

ಅಪರಾಧ. ದಯಮಾಡಿ ಈ ಸಾಹಸ ಮಾಡಬೇಡಿ. ನಾನು ಆಗ ಮಾತನಾಡುವಾಗ ಹಾಲಿನ ಪುಡಿಗೆ ಬೇಡಿಕೆ ಇಲ್ಲ, stock ಇದೆ, KMF ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ, ಅದರ ಬಗ್ಗೆ ನೀವು ಯೋಚನೆಯನ್ನು ಮಾಡಬೇಕು ಎಂದು ಹೇಳಿದ್ದೆ ಇನ್ನು ಸೈಕಲ್ ಬಗ್ಗೆ ಹೇಳುವುದಾದರೆ 52 ಲಕ್ಷ ವಿದ್ಯಾರ್ಥಿಗಳಿಗೆ ಈ ಶೈಕ್ಷಣಿಕ ವರ್ಷದಲ್ಲಿ ಸೈಕಲ್ ಕೊಡಬೇಕು. ಅದಕ್ಕೆ ಇನ್ನೂ ಪೂರ್ವಭಾವಿ ಸಿದ್ದತೆಗಳು ಆಗಿಲ್ಲವೆಂದು ತಿಳಿದುಕೊಂಡಿದ್ದೇನೆ. ಮಕ್ಕಳು ಬಹಳ ಆಸೆಗಣ್ಣಿನಿಂದ ಸೈಕಲ್ ಯಾವಾಗ ಬರುತ್ತದೆಂದು ಕಾಯುತ್ತಿದ್ದಾರೆ. ನೀವು ಆ ಕಡೆಗೆ ಗಮನವನ್ನು ಕೊಡಬೇಕು. ಅದೇ ರೀತಿ ಮಕ್ಕಳಿಗೆ ಸಮವಸ್ತ್ರಗಳ ವಿಚಾರದಲ್ಲಿ ಹೇಳುವುದಾದರೆ, ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ವಿನಂತಿ ಮಾಡುವುದೇನೆಂದರೆ ಹಿಂದಿನ ಸರ್ಕಾರ ಮಾಡಿದಂತಹ ಒಳ್ಳೆಯ ಕೆಲಸಗಳನ್ನು ಮುಂದುವರೆಸಿ. ಒಂದು ಮಾಡಿದ್ದನ್ನು ಎರಡು ಪಟ್ಟು ಮಾಡಿ. ಆದರೆ ಆದರಿಂದ ಹಿಂದೆ ಸರಿಯುವುದಕ್ಕೆ ಹೋಗಬೇಡಿ. ಏಕೆಂದರೆ ಸಮವಸ್ತ್ರವನ್ನು ಎರಡು ಸೆಟ್ ಕೊಡುತ್ತೇವೆಂದು ಹೇಳಿದ್ದೆವು. ನೀವು ಒಂದು ಸೆಟ್ ಕೊಡುವುದಕ್ಕೂ ಕೂಡ ಪೂರ್ವಭಾವಿ ಸಿದ್ಧತೆಯನ್ನು ಮಾಡಿಕೊಂಡಿಲ್ಲ. ಸಹಜವಾಗಿ Parents ಮತ್ತು ಮಕ್ಕಳು ಸರ್ಕಾರದ ವಿರುದ್ಧವಾಗಿ ಬೀಳುವುದಕ್ಕೆ ನೀವೇ ಅವಕಾಶವನ್ನು ಮಾಡಿಕೊಟ್ಟಂತೆ ಆಗುತ್ತದೆ. ಅದಕ್ಕಾಗಿ ತಕ್ಷಣ ಸಂಬಂಧಪಟ್ಟ ಇಲಾಖೆಗಳಲ್ಲಿ ತುರ್ತಾಗಿ ಶಾಲೆಗಳು ಪ್ರಾರಂಭವಾದಾಗ ಪಠ್ಯಪುಸ್ತಕ ಇರಬಹುದು, ಸಮವಸ್ತ್ರ ಇರಬಹುದು, ಈ ವ್ಯವಸ್ಥೆಗಳ ಬಗ್ಗೆ ಗಂಭೀರವಾಗಿ ತಾವು ಯೋಚನೆಯನ್ನು ಮಾಡಬೇಕು. ಮಾರ್ಚ್ ಅಂತ್ಯದಲ್ಲಿ ಇದರ ಎಲ್ಲಾ ಸಿದ್ಧತೆಗಳು ಆಗಬೇಕಾಗಿತ್ತು. ಈಗ ಜೂನ್ ತಿಂಗಳು ಬಂದರೂ ಸಹ ಅದರ ಬಗ್ಗೆ ಚಿಂತನೆಯನ್ನು ಮಾಡಿಲ್ಲ. ದಯಮಾಡಿ ತಾವು ಆ ಕಡೆ ಗಮನವನ್ನು ಕೊಡಬೇಕೆಂದು ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಮಾಡುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ಹಿರಿಯ ಸದಸ್ಯರಾದಂತಹ ರಾಯರೆಡ್ಡಿಯವರು ಬಹಳ ಒಳ್ಳೆಯ ರೀತಿಯಲ್ಲಿ ಭಾಷಣವನ್ನು ಮಾಡಿದರು. ನಾನು ಅವರ ಭಾಷಣವನ್ನು ಇಲ್ಲಿಯೇ ಕುಳಿತು ಪೂರ್ತಿಯಾಗಿ ಕೇಳುತ್ತಿದ್ದನು. ಆದರೆ ನಿಮ್ಮ ಬಾಯಿಯಲ್ಲಿ ಕರ್ನಾಟಕ ಭ್ರಷ್ಟಾಚಾರದಲ್ಲಿ ಬಿಹಾರ್ ರಾಜ್ಯವನ್ನು ಮೀರಿಸುತ್ತಿದೆ ಅಥವಾ ಬಿಹಾರ್ ಆಗುತ್ತಿದೆ ಎಂದು ಹೇಳಿದ್ದಿರಿ. ನಾನು ಹೇಳುವುದು ಏನೆಂದರೆ ದೇಶದ ಜನ ಯಾವ್ಯಾವ ರಾಜ್ಯದಲ್ಲಿ ಏನೇನು ಆಗುತ್ತಿದೆ ಎಂದು ನೋಡುತ್ತಿದ್ದಾರೆ. ನಾನು

ಏನೂ ಮಾತನಾಡುವುದಿಲ್ಲ. ಇವತ್ತಿನ ಪತ್ರಿಕೆಯನ್ನು ತಾವೇ ನೋಡಿ. ನಾವೆಲ್ಲ ತಲೆತಗ್ಗಿಸುವಂತಹ ಘಟನೆಗಳು ಏನು ನಡೆಯುತ್ತಿವೆ ಎಂದು ನೀವು ಗಮನಿಸಿ. ಇಂತಹ ಸಂದರ್ಭದಲ್ಲಿ ನಮ್ಮ ರಾಜ್ಯ ಭ್ರಷ್ಟಾಚಾರದಲ್ಲಿ ಬಿಹಾರ್ ಆಗುತ್ತಿದೆ ಎನ್ನುವುದು ನಾವೆಲ್ಲರೂ ತಲೆ ತಗ್ಗಿಸುವಂತಹ ವಿಚಾರ. ಅದರ ಅಂಕಿಅಂಶಗಳನ್ನು ಕೊಡಿ. ಉದಾಹರಣೆಗಳನ್ನು ಕೊಡಿ. ಅದರ ಬಗ್ಗೆ ಇಲ್ಲಿ ಎಲ್ಲವನ್ನೂ ಎಳೆಎಳೆಯಾಗಿ ಬಿಡಿಸಿ ಚರ್ಚೆಮಾಡೋಣ. ನೀವು ಅಧಿಕಾರದಲ್ಲಿದ್ದೀರಿ, ಫೈಲ್‌ಗಳು ನಿಮ್ಮ ಹತ್ತಿರ ಇದೆ, ನೀವು ಸಚಿವರುಗಳಿದ್ದೀರಿ, ಅಧಿಕಾರಿಗಳು ಇದ್ದಾರೆ, ನಿಮಗೆ ಹಿಂದಿನ ಸರ್ಕಾರದ ಎಲ್ಲಾ ಮಾಹಿತಿಗಳನ್ನು ಕೊಡುತ್ತಾರೆ. ಅದನ್ನೆಲ್ಲಾ ಬಯಲು ಮಾಡುವುದಕ್ಕೆ ನಾನೇನೂ ಸಂಕೋಚ ಮಾಡಿಕೊಳ್ಳುವ ಪ್ರಶ್ನೆ ಇಲ್ಲ, ನೀವು ಮಾಡಲೇಬೇಕು. ನೀವು ಹಿಂದಿನ ಸರ್ಕಾರ ಮಾಡಿರುವಂತಹ ಹಗರಣಗಳನ್ನು ಬಯಲು ಮಾಡಲೇಬೇಕು. ಆದರೆ ನೀವು ಇನ್ನೂ ಸಹ ಹೆಜ್ಜೆ ಇಡುತ್ತಿದ್ದ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ರಾಜ್ಯಪಾಲರ ಮೂಲಕ ಹೇಳಿಸುವಂಥದ್ದು, ನೀವು ಬಿಹಾರ್‌ಗೆ ಹೋಲಿಕೆ ಮಾಡುವಂಥದ್ದು, ಇದು ಒಂದು ರೀತಿ ನಮಗೆ ನಾವೇ ಅಪಮಾನ ಮಾಡಿಕೊಳ್ಳುತ್ತಿದ್ದೇವೆ. ಕನ್ನಡಿಗರನ್ನು ದೇಶದ ಜನರ ಮುಂದೆ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂತಹ ಅಕ್ಷಮ್ಯ ಅಪರಾಧ ಮಾಡುತ್ತಿದ್ದೇವೆಂದು ನನಗೆ ಅನಿಸುತ್ತದೆ. ಇಲ್ಲಿ ತಾವು ಅಕ್ರಮ ಗಣಿಗಾರಿಕೆ ಬಗ್ಗೆ ಮಾತನಾಡಿದ್ದೀರಿ. ಅದು ಸರಿಯಿದೆ. ಅಕ್ರಮ ಗಣಿಗಾರಿಕೆ ನಿಲ್ಲಬೇಕು. ನಮ್ಮ ತಾತ, ಮುತ್ತಜ್ಜರು ಈ ಸಂಪತ್ತನ್ನು ಉಳಿಸಿಕೊಂಡು ಬಂದಿದ್ದರು, ಅವರು ಆಗಲೇ ಖಾಲಿ ಮಾಡಬಹುದಾಗಿತ್ತು. ಪ್ರಪಂಚದ ಮುಂದುವರೆದ ಯಾವುದೇ ದೇಶದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಖನಿಜ ಸಂಪತ್ತಿದ್ದರೂ ಅವರು ಖಾಲಿ ಮಾಡುತ್ತಿಲ್ಲ. ನಮ್ಮಂತಹ ಮೂರ್ಖರು ಇರುವಂತಹ ರಾಜ್ಯಗಳಿಂದ ಏನು export ಮಾಡುತ್ತಿದ್ದೇವೆ, ಇದನ್ನು ಉಪಯೋಗ ಮಾಡಿಕೊಂಡು ಅದರ ಲಾಭ ಮಾಡಿಕೊಳ್ಳುತ್ತಿದ್ದಾರೆಯೇ ಹೊರತು ಅವರ ಸಂಪತ್ತನ್ನು ಅವರು touch ಮಾಡಿಲ್ಲ. ಹೀಗಾಗಿ ನಾನು ಬಹಳ ಸಾಹಸ ಮಾಡಿ ಯಾವ ಪರಿಸ್ಥಿತಿಯಲ್ಲಿ ಸರ್ಕಾರ ನಡೆಸುತ್ತಿದ್ದೆ ಎಂದು ತಮಗೆ ಗೊತ್ತಿದೆ. ಇಷ್ಟಾದರೂ ಸಹ ಈ ಗಣಿಗಾರಿಕೆಯನ್ನು ರದ್ದು ಮಾಡುವುದಕ್ಕೆ ನಾನು ಏನೆಲ್ಲ ಪ್ರಯತ್ನ ಮಾಡಿದ್ದೇನೆಂದು ಎಲ್ಲಾ ಗೊತ್ತಿರುವಂತಹ ಸಂಗತಿ. Export ರದ್ದು ಮಾಡಿದೆ.

ಆದರಿಂದ ಎಲ್ಲಾ ವಿರೋಧಗಳನ್ನು ಕಟ್ಟಿಕೊಂಡೆ. ಮುಖ್ಯಮಂತ್ರಿ ಸ್ಥಾನವನ್ನು ಕಳೆದುಕೊಳ್ಳುವುದಕ್ಕೂ ನಾನು ಸಿದ್ದನಾದೆ. ಈ ರೀತಿ ಒಂದು ಅಕ್ರಮಗಳ ಹಗರಣವನ್ನು ಬಯಲು ಮಾಡುವುದಕ್ಕೆ ಮುಂದೆ ನಿಂತವನು ನಾನು. ನಾನು ಮುಂದೆ ಅದರ ವಿವರಕ್ಕೆ ಬರುತ್ತೇನೆ. Land de-notification ಬಗ್ಗೆ ಮಾತನಾಡಿದರು. ವರ್ಗಾವಣೆ ಬಗ್ಗೆ ಮಾತನಾಡಿದಿರಿ. ರಾಜಕಾರಣಿಗಳು ಈ ದಂಧೆಯನ್ನು ಮಾಡುತ್ತಿದ್ದಾರೆಂದು ನೀವು ಹೇಳಿದ್ದೀರಿ. ಇವೆಲ್ಲದರ ಬಗ್ಗೆ ಸಮಗ್ರ ತನಿಖೆಯಾಗಬೇಕೆಂದು ಹೇಳಿದ್ದೀರಿ. ಮಾನ್ಯ ಹಿರಿಯ ಸದಸ್ಯರಾದಂತಹ ರಮೇಶ್ ಕುಮಾರ್‌ರವರು all are indirectly beneficiaries ಎಂದು ಹೇಳಿದರು. ಇದು ಬಹಳ ಅರ್ಥಗರ್ಭಿತವಾಗಿದೆ. ಎಲ್ಲಾ ಹಗರಣಗಳಲ್ಲಿ ಒಂದಲ್ಲ ಒಂದು ರೀತಿ ನಾವೆಲ್ಲಾ ಭಾಗಿಗಳಾಗಿದ್ದೇವೆ. ಇಲ್ಲದಿದ್ದರೆ ಈ ಹಗರಣಗಳು ನಡೆಯುವುದಕ್ಕೆ ಸಾಧ್ಯವಿಲ್ಲ. ಸದನದಲ್ಲಿರುವ ನಾವು ಮತ್ತು ನಮ್ಮ ಅಧಿಕಾರಿಗಳು ಸ್ವಚ್ಛ ಇದ್ದರೆ ಅರ್ಧ ಭ್ರಷ್ಟಾಚಾರವನ್ನು ಬಿಗಿ ಮಾಡುವುದಕ್ಕೆ ಸಾಧ್ಯವಿದೆನ್ನುವ ಅರ್ಥದಲ್ಲಿ ಸನ್ಮಾನ್ಯ ರಮೇಶ್ ಕುಮಾರ್‌ರವರು ಹೇಳಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಮುಂದೆ ಲೋಕ್ತಾಯುಕ್ತ ಸಂತೋಷ್ ಹೆಗ್ಡೆಯವರ ವರದಿ ಇದೆ. ಅದೇ ರೀತಿ allotment of 'G' category sites ವಿಚಾರದಲ್ಲಿ ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಂಥದ್ದು ಇದೆ. ಅದೂ ಮಾಡಿರುವುದೂ ಕೂಡ ನಮ್ಮ ಮುಂದೆ ಇದೆ. ಅದೇ ರೀತಿ de-notification of lands ಅನ್ನು ಮಾಡಿರುವುದೂ ನಮ್ಮ ಕಣ್ಣಮುಂದೆ ಇದೆ.

K.I.A.D.B. ಯಿಂದ ಲ್ಯಾಂಡನ್ನು ಕೈಗಾರಿಕೆ ಮಾಡುವವರೆಗೆ ಕೊಟ್ಟಿರುವುದೂ ನಮ್ಮ ಕಣ್ಣಮುಂದೆ ಇದೆ. ನನ್ನ ಪ್ರಕಾರ, all the Chief Ministers are using their discretionary powers and granting sites under G-Category and de- notification of lands. ಇದನ್ನು ಎಲ್ಲರೂ, ಎಲ್ಲರ ಕಾಲದಲ್ಲೂ ಮಾಡಿಕೊಂಡು ಬಂದಿದ್ದಾರೆ. ಸನ್ಮಾನ್ಯ ರಮೇಶ್ ಕುಮಾರ್‌ರವರೇ, ಹಿಂದೆ ಇದ್ದಂಥ ಎಲ್ಲ ಮುಖ್ಯಮಂತ್ರಿಗಳೂ ಇದನ್ನು ಮಾಡಿಕೊಂಡು ಬಂದಿದ್ದಾರೆ. ನಾನು ನಿಮಗೆ ಒಂದು ಮಾತನ್ನು ಹೇಳುತ್ತೇನೆ, ನಾನು ಎಲ್ಲರನ್ನು ನಂಬಿದಂಥ ವ್ಯಕ್ತಿ, ನಾನು ಮುಖ್ಯಮಂತ್ರಿಯಾಗಿದ್ದಾಗ, ಎಲ್ಲರಿಗೂ ಅಧಿಕಾರವಿದೆ ಎಂದ ಮೇಲೆ ಏಕೆ

ಬೇಡವೆಂದು ಹೇಳುತ್ತೀರೆಂದು ಹೇಳಿ ಕಾಂಗ್ರೆಸ್‌ನವರು, ಜೆ.ಡಿ.(ಎಸ್)ನವರು, ಬಿ.ಜೆ.ಪಿ.ಯವರು ಹೀಗೆ ಎಲ್ಲ ಪಕ್ಷದ ಯಾವ ಎಂ.ಎಲ್.ಎ.ಗಳು ಮತ್ತು ಎಂ.ಪಿ.ಗಳು ಬೆಂಗಳೂರಿನಲ್ಲಿ ಸೈಟ್ ತೆಗೆದುಕೊಂಡಿರಲಿಲ್ಲ, ಅವರೆಲ್ಲರ ಪಟ್ಟಿ ಮಾಡಿಸಿ, ನಾನೇ ಅಪ್ಲಿಕೇಷನ್‌ಗಳನ್ನು ತರಿಸಿಕೊಂಡು ಅವರನ್ನು ಕರೆದು ಆರ್ಡರ್ ಮಾಡಿಸಿ ಅವರ ಮನೆಗಳಿಗೆ ಕಳುಹಿಸಿಕೊಟ್ಟೆ. ನಾನು ಅಪರಾಧ ಮಾಡಿರಬಹುದು. ಇವತ್ತು 3–4 ಸೈಟುಗಳನ್ನು ಮಾಡಿಕೊಂಡಿರುವಂಥವರು ಕೆಲವರಿದ್ದಾರೆ. ಅದು ಅಕ್ಷಮ್ಯ ಅಪರಾಧ. ಬೆಂಗಳೂರಿನಲ್ಲಿ ಮನೆಯಿದ್ದೂ ಬಿ.ಡಿ.ಎ.ನಿಂದ ಸೈಟು ತೆಗೆದುಕೊಳ್ಳದೇ ಇರುವವರು ಎಷ್ಟು ಜನರಿದ್ದಾರೆ ಸ್ವಾಮಿ? ಕೇವಲ ಬೆರಳೆಣಿಕೆಯಷ್ಟು ಜನ ಅಂಥವರು ಸಿಗಬಹುದು. ಈ ಕೆಲಸ ಆಯಿತು. ಹಿಂದೆ ಇದ್ದಂಥ ಎಲ್ಲ ಮುಖ್ಯಮಂತ್ರಿಗಳೂ ಇದನ್ನು ಮಾಡಿದರು. ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಒತ್ತಾಯವನ್ನು ಮಾಡುತ್ತೇನೆ, ಈ ದೇಶದ ಜನರಲ್ಲಿ ಚರ್ಚಿತವಾಗಿರುವಂಥ ಮತ್ತು ಕರ್ನಾಟಕದಲ್ಲಿ ಚರ್ಚೆಯಾಗುತ್ತಿರುವಂಥ ನಾಲ್ಕು ಪ್ರಮುಖವಾದಂಥ ವಿಷಯಗಳ ಬಗ್ಗೆ ಅಂದರೆ,

(I) Allotment of sites under G-Category (2) De-notification of land (3) Allotment of land to industries by K.I.A.D.B. ಮತ್ತು (4) ಗಣಿಗಾರಿಕೆ ಈ ನಾಲ್ಕು ವಿಷಯಗಳ ಬಗ್ಗೆ 1999ರಿಂದ ಇಲ್ಲಿಯವರೆಗಿನ ಪೂರ್ಣ ಮಾಹಿತಿಗಳನ್ನು ಇಲ್ಲಿ ಟೇಬಲ್ ಮಾಡಿ, ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಈ ಬಗ್ಗೆ ನಾನು ಮುಖ್ಯಮಂತ್ರಿಗಳನ್ನು ಒತ್ತಾಯ ಮಾಡುತ್ತೇನೆ. ಎರಡನೆಯದಾಗಿ, ರಾಜ್ಯದ ಹಣಕಾಸಿನ ಪರಿಸ್ಥಿತಿಯ ಬಗ್ಗೆ ನೀವು ಟೀಕೆ–ಟಿಪ್ಪಣಿಗಳನ್ನು ಮಾಡುವುದಕ್ಕೆ ಮುಂಚೆ ಒಂದು White paper ಅನ್ನು ಹೊರಡಿಸಿ. ಮೂರನೆಯದಾಗಿ, ಮೇಲೆ ಹೇಳಿದ ನಾಲ್ಕು ವಿಷಯಗಳ ಬಗ್ಗೆ 1999ರಿಂದ ಇಲ್ಲಿಯವರೆಗೆ ಏನಾಗಿದೆ ಎನ್ನುವ ಬಗ್ಗೆ ಒಂದು Commission of Enquiry ಮಾಡಿಸಿ, ಎಲ್ಲ ಸತ್ಯ ವಿಷಯಗಳೂ ಬಯಲಾಗಲಿ. ರಾಜ್ಯದ ಜನತೆಗೆ ವಾಸ್ತವಿಕ ಸತ್ಯ ಸಂಗತಿಗಳು ಗೊತ್ತಿಲ್ಲದೇ ಎಲ್ಲರನ್ನೂ ಅಪರಾಧಿ ಸ್ಥಾನದಿಂದ ನೋಡುವುದನ್ನು ದೂರ ಮಾಡುವುದಕ್ಕೋಸ್ಕರ, 1999ರಿಂದ ಇಲ್ಲಿಯವರೆಗೆ, ಯಾರ್ಯಾರ ಕಾಲದಲ್ಲಿ ಏನೇನಾಯಿತು ಎನ್ನುವ ಎಲ್ಲ ಮಾಹಿತಿಗಳು, ಎಲ್ಲ ವಿವರಗಳು ಜನತೆಗೆ ಗೊತ್ತಾಗಬೇಕೆಂದಿದ್ದರೆ ನೀವು ಒಂದು Commission of Enquiry

ಮಾಡಿಸಬೇಕೆನ್ನುವ ಒತ್ತಾಯವನ್ನು ಮಾಡುತ್ತೇನೆ. ಲೋಕಾಯುಕ್ತ ಸಂತೋಷ ಹೆಗ್ಡೆಯವರ ರಿಪೋರ್ಟನ್ನು ಇಲ್ಲಿ ಟೇಬಲ್ ಮಾಡಿ, ಅದರ ಮೇಲೆ ಒಂದೆರಡು ದಿನ ಚರ್ಚೆ ಮಾಡಲು ಅವಕಾಶವನ್ನು ಕೊಡಬೇಕು. ಆ ಬಗ್ಗೆ 2–3 ದಿನ ಚರ್ಚೆ ಮಾಡೋಣ. ಆಗ ಸತ್ಯ ಏನು ಎನ್ನುವುದು ತಮಗೆಲ್ಲ ಗೊತ್ತಾಗುತ್ತದೆ ಎನ್ನುವುದು ನನ್ನ ಅಪೇಕ್ಷೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಮತ್ತೊಂದು ವಿಚಾರವೆಂದರೆ, ನಾನು ಈ ಮನೆಯಲ್ಲಿ ನಿಂತು ಪ್ರಾರಂಭದಲ್ಲೇ ನನ್ನ ಅಳಲನ್ನು ಹೇಳಿಕೊಳ್ಳಲೇಬೇಕು. ಏಕೆಂದರೆ ನಾನು ಅಪರಾಧಿ ಸ್ಥಾನದಲ್ಲಿ ನಿಂತಿರುವಂಥವನು. ಬಹುಶಃ ಈ ದೇಶದ ಇತಿಹಾಸದಲ್ಲಿ ಮೊದಲು ಬಾರಿಗೆ ತನಿಖೆ ಪೂರ್ಣವಾಗದೇ 24 ದಿವಸಗಳ ಕಾಲ ಕಸ್ಟಡಿಯಲ್ಲಿ ಇದ್ದವನು ನಾನು. ನೀವು ಪ್ರಯತ್ನ ಮಾಡಲಿಲ್ಲ, ಜೆ.ಡಿ.(ಎಸ್)ನವರು ಪ್ರಯತ್ನ ಮಾಡಲಿಲ್ಲ, ನಮ್ಮವರೇ ಪ್ರಯತ್ನ ಮಾಡಿದರು. ಸಂತೋಷ ಹೆಗ್ಡೆಯವರು ರಿಪೋರ್ಟ್ ಕೊಟ್ಟರು, ಸಾಯಂಕಾಲ ದೆಹಲಿಗೆ ಬರುವುದಕ್ಕೆ ಹೇಳಿದರು, ಅಲ್ಲಿ ನಮ್ಮ ರಾಷ್ಟ್ರೀಯ ನಾಯಕರಿದ್ದರು, ಸಂತೋಷ ಹೆಗ್ಡೆ ರಿಪೋರ್ಟ್‌ನಲ್ಲಿ ಏನೂ ಸತ್ಯಾಂಶವಿಲ್ಲ, ನೀವು ಅಪರಾಧಿಯಲ್ಲ, ಆದರೆ ವಿಶೇಷವಾದ ಕಾರಣಕ್ಕೋಸ್ಕರ ನೀವು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು, ನಾವು ಪಾರ್ಲಿಮೆಂಟಿನಲ್ಲಿ ನಮ್ಮದೇ ಆದಂಥ ಕೆಲವು ಡಿಮ್ಯಾಂಡ್‌ಗಳನ್ನಿಡಬೇಕಾಗಿದೆ ಎನ್ನುವ ನೆಪ ಮಾಡಿ, ಸಂತೋಷ ಹೆಗ್ಡೆ ರಿಪೋರ್ಟ್ ಬಂದಂಥ ಮೂರು ದಿವಸಗಳೊಳಗಾಗಿ ನನ್ನ ರಾಜೀನಾಮೆಯನ್ನು ತೆಗೆದುಕೊಂಡರು. ನಾನು ರಾಜೀನಾಮೆ ಕೊಟ್ಟೆ. ನಂತರ ನಾನು ವಿವರಗಳಿಗೆ ಬರುತ್ತೇನೆ. ಈ ಭಾರತ ದೇಶದ ಇತಿಹಾಸದಲ್ಲಿ ಅಥವಾ ಪಾಕಿಸ್ತಾನದಲ್ಲೂ ಸಹ, ತನಿಖೆ ಮಾಡದೇ ಜೈಲಿಗೆ ಕಳುಹಿಸಿದಂಥ ಉದಾಹರಣೆಯಿಲ್ಲ ಎಂದು ಹೈಕೋರ್ಟಿನ ನ್ಯಾಯಾಧೀಶರು ಹೇಳುತ್ತಾರೆ. ಆದರೆ ನನಗೆ ಆ ಶಿಕ್ಷೆಯಾಯಿತು. ಬಹುಶಃ ಅಕ್ರಮ ಗಣಿಗಾರಿಕೆಯನ್ನು ತಡೆಯಬೇಕು ಎಂದು ಬಳ್ಳಾರಿಯಲ್ಲಿ ನಿಂತು ಸಂತೋಷ ಹೆಗ್ಡೆಯವರಿಗೆ ನನ್ನ ಅವಧಿಯನ್ನೂ ಸೇರಿಸಿ ತನಿಖೆ ಮಾಡಬೇಕು ಎಂದು ವಿನಂತಿ ಮಾಡಿದವನೇ ನಾನು. ಅವರಿಗೆ ಅದರ ಜವಾಬ್ದಾರಿ ಕೊಟ್ಟವನೇ ನಾನು. ನ್ಯಾಯಮೂರ್ತಿಗಳಾದಂಥ ಜಸ್ಟೀಸ್ ಪಿಂಟೋ, ಜಸ್ಟೀಸ್ ಕೆ.ಭಕ್ತವತ್ಸಲಂ ಹಾಗೂ ಜಸ್ಟೀಸ್ ಕೆ.ಗೋವಿಂದರಾಜ್‌ರವರು, ಲೋಕಾಯುಕ್ತ ವರದಿಯನ್ನು ತಿರಸ್ಕರಿಸಿ ಕೊಟ್ಟಿರುವಂಥ ಆದೇಶವೇನಿದೆ, ಅದರ ವಿವರಗಳಿಗೆ

ನಾನು ನಂತರ ಬರುತ್ತೇನೆ. ಜಿ–ಕೆಟಗರಿಯಲ್ಲಿ ತಮ್ಮವರಿಗೆ ಸೈಟು ಕೊಟ್ಟರು ಎಂದು ಹೇಳುತ್ತಾರೆ. ಆದರೆ, 3–4–5 ಸೈಟುಗಳನ್ನು ತೆಗೆದು ಕೊಂಡಂಥವರಿದ್ದಾರೆ. ನನ್ನ ಮಗ ಲೋಕಸಭಾ ಸದಸ್ಯ ಎಂದು ಹೇಳಿ ಒಂದು ಸೈಟು ಕೊಟ್ಟೆ. Electronic media, Print mediaಗಳಲ್ಲಿ ಅದೇ ದೊಡ್ಡ issue ಆಯಿತು. 16 ದಿವಸಗಳು ಅದರ ಬಗ್ಗೆ ಚರ್ಚೆಯಾಯಿತು. ನಾನು ಬೇರೆಯವರ ಬಗ್ಗೆ ಯೋಚನೆ ಮಾಡಲಿಲ್ಲ,ಕೊನೆಗೆ ನಾನು, ಎಂ.ಪಿ.ಯಾಗಿದ್ದಂಥ ನನ್ನ ಮಗನಿಗೆ ಕಾನೂನಿನ ಚೌಕಟ್ಟಿನಲ್ಲಿ ಕೊಟ್ಟಂಥ ಸೈಟಿಗೆ ಅವನು ಹಣ ಕಟ್ಟಿ ತೆಗೆದುಕೊಂಡಿದ್ದರೂ, ಅಲ್ಲಿ ಕೆಲಸ ಶುರು ಮಾಡಿದ್ದರೂ ಸಹ ಆ ಸೈಟನ್ನು ನಾನು ಸರ್ಕಾರಕ್ಕೆ ವಾಪಸ್ಸು ಕೊಟ್ಟೆ. ಕೈಗಾರಿಕೆಯನ್ನು ಪ್ರಾರಂಭ ಮಾಡುವುದಕ್ಕೋಸ್ಕರವಾಗಿ ಕಾನೂನಿನಂತೆಯೇ K.I.A.D.B. ಯಿಂದ ಎರಡು ಎಕರೆ ಜಮೀನು ತೆಗೆದುಕೊಂಡಿದ್ದರು. ಅಲ್ಲಿ ಇಂಡಸ್ಟ್ರಿ ಪ್ರಾರಂಭವಾಗಿತ್ತು. ನನ್ನ ಮೇಲೆ ಗೂಬೆ ಕೂರಿಸಲು ಕೇಂದ್ರದಲ್ಲಿದ್ದಂಥ ನಮ್ಮ ಪಕ್ಷದವರು ಹೊರಟರು ಎಂದು ಗೊತ್ತಾದ ಮೇಲೆ ನಾನು, ಅದೂ ಬೇಡ ಎಂದು ಹೇಳಿ ಅದನ್ನೂ ಸಹ ಸರ್ಕಾರಕ್ಕೆ ವಾಪಸ್ಸು ಕೊಟ್ಟೆ. ನಾನು ಯಡಿಯೂರಪ್ಪನವರ ಸ್ಥಾನದಲ್ಲಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೆ ಎಂದು ಹೇಳುವ ಮಟ್ಟಕ್ಕೆ ಸನ್ಮಾನ್ಯ ಈಶ್ವರಪ್ಪನವರು ಹೋದರು. ಈ ಕಡೆ ಮತ್ತು ಆ ಕಡೆ ಇರುವ ಅನೇಕ ಜನ ಹೊಸ ಸದಸ್ಯರಿಗೆ ಸತ್ಯ ಗೊತ್ತಾಗಲಿ ಎಂದು ಹೇಳುತ್ತಿದ್ದೇನೆ. ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಜಸ್ಟೀಸ್ ಪಿಂಟೋರವರು ಬೇಲ್ ಕೊಡುವಂಥ ಸಂದರ್ಭದಲ್ಲಿ ಹೇಳಿರುವಂಥ ಮಾತುಗಳನ್ನು ಹೇಳುತ್ತೇನೆ. ಎಲ್ಲರಿಗೂ ನಾನು ಆ ಜಡ್ಜ್‌ಮೆಂಟ್ ಕಾಪಿಗಳನ್ನು ಕಳುಹಿಸಿ ಕೊಡುತ್ತೇನೆ. ಅದರಲ್ಲಿ ಅವರು ಹೇಳುತ್ತಾರೆ.

"ಚಾಲ್ತಿಯಲ್ಲಿರುವ ಕಾನೂನಿನ ಪ್ರಧಾನತೆಯಲ್ಲಿ ಒಬ್ಬ ಮನುಷ್ಯನ ವ್ಯಕ್ತಗತ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಅಧಿಕಾರ ಕಾನೂನಿನಲ್ಲಿ ಇಲ್ಲ. ಪ್ರತಿಯೊಬ್ಬ ನಾಗರಿಕನ ಅಜ್ಞಾನದ ಊಹೆಯನ್ನು ಕಾನೂನು ಅರ್ಹ ಕಾರ್ಯಕ್ಷಮತೆಯಿಂದ ನ್ಯಾಯಾಲಯ ಅಪರಾಧಿ ಎಂದು ಪರಿಗಣಿಸುವವರೆಗೆ ರಕ್ಷಣೆ ನೀಡುತ್ತದೆ. ಸಹಜವಾಗಿ ಮೇಲುನೋಟಕ್ಕೆ ತೋರುವ ವ್ಯಾಜ್ಯ ಕಡತದಲ್ಲಿ ಸಾಮಾನ್ಯ, ತುಂಬ ತೀವ್ರತರವಾದ ತಪ್ಪಿತಸ್ಥನೆಂದು ಆಪಾದಿತ ಕಾಣುವವರೆಗೆ ನ್ಯಾಯಾಲಯ ಅಪರಾಧಿಗೆ ಜಾಮೀನು ಕೊಡುವುದರಲ್ಲಿ ಸಡಿಲವಾಗಿದೆ. ಸಾಮಾನ್ಯ ಸಂದರ್ಭದಲ್ಲಿ ತಪ್ಪಿತಸ್ಥನು ಮರಣದಂಡನೆಗೆ ಗುರಿಯಾಗುವ ತಪ್ಪನ್ನು

ಮಾಡಿದ್ದಾರೆಯೇ ಅಥವಾ ಸಮಾಜದಲ್ಲಿ ಅವರು ಅಪಾಯಕಾರಿಯೇ ಎಂಬುದನ್ನು ನ್ಯಾಯಾಲಯ ಜಾಮೀನು ಕೊಡುವ ವೇಳೆ ಪರಿಗಣಿಸಬೇಕಾಗುತ್ತದೆ. ಪ್ರಾಮಾಣೀಕೃತ ಹೇಳಿಕೆಯನ್ನು ಎಚ್ಚರಿಕೆಯಿಂದ ನೋಡಿದರೆ ಮನವಿಯಲ್ಲಿನ ಕಡತಗಳು, ಮನವಿಯಲ್ಲಿನ ವಿಷಯಗಳನ್ನು ಸಾಬೀತುಪಡಿಸಲು ಯೋಗ್ಯವಾಗಿರುವುದಿಲ್ಲ. ಈ ಸಂದರ್ಭದಲ್ಲಿ ಪ್ರಾಮಾಣೀಕೃತ ಹೇಳಿಕೆ ಅಪರಾಧಿಯನ್ನು ತಪ್ಪಿತಸ್ಥ ಎನ್ನುವುದಕ್ಕೆ ಸಾಧ್ಯವಿಲ್ಲ. ಅಪರಾಧಿ ಸ್ಥಾನದಲ್ಲಿರುವ ಮಾಜಿ ಮುಖ್ಯಮಂತ್ರಿ ಹಿಂದೆ ಯಾವುದೇ ತಪ್ಪನ್ನು ಮಾಡಿಲ್ಲ ಅಥವಾ ಕಡತವನ್ನು ತಿದ್ದಿರುವುದಕ್ಕೆ ಆಧಾರವಿಲ್ಲ. ಆಪಾದಿತರ ಮೇಲೆ ಯಾವುದೇ ವ್ಯಾಜ್ಯ ವಿಲೇವಾರಿ ಇಲ್ಲ ಹಾಗೂ ಹಿಂದೆ ತಪ್ಪಿತಸ್ಥರೆಂದು ತೀರ್ಮಾನವಾಗಿಲ್ಲ. ದೇಶದ ನ್ಯಾಯಾಂಗದ ಇತಿಹಾಸದಲ್ಲಿ ಖಾಸಗಿ ದೂರಿನ ಮೇಲೆ ಯಾವುದೇ ವಿಚಾರಣೆ ನಡೆಸದೇ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವಂಥದ್ದು ಮತ್ತು ವಿಚಾರಣೆ ಇಲ್ಲದೆಯೇ ಒಬ್ಬ ವ್ಯಕ್ತಿಯನ್ನು ನ್ಯಾಯಾಂಗ ಕಸ್ಟಡಿಗೆ ಕೊಟ್ಟಿರುವಂಥದ್ದು ದೇಶದಲ್ಲೇ ಪ್ರಥಮ. ಇಂಥ ಒಂದು ಅನ್ಯಾಯಕ್ಕೆ ಗುರಿಯಾದವರು ಶ್ರೀ ಬಿ.ಎಸ್.ಯಡಿಯೂರಪ್ಪನವರು. ದುರಾದೃಷ್ಟವಶಾತ್ ಕೆಳಗಿನ ನ್ಯಾಯಾಲಯದಲ್ಲಿ ಅವರಿಗೆ ಬೇಲ್ ದೊರೆಯದಿದ್ದುದು ಮತ್ತೊಂದು ಇತಿಹಾಸ. ಆದ್ದರಿಂದ ಆಪಾದಿತರಾಗಿರುವ ಯಡಿಯೂರಪ್ಪನವರಿಗೆ ಜಾಮೀನಿನ ಮೇಲೆ ಬಿಡುಗಡೆ ಮಾಡಲು ತೀರ್ಪು ನೀಡಿದ್ದೇನೆ". ನಾನು 24 ದಿವಸ ಕಸ್ಟಡಿಯಲ್ಲೇ ಇದ್ದಮೇಲೆ ಬಂದಿರುವ ತೀರ್ಪು ಇದು. ಇನ್ನೊಂದು ಬಹಳ ಪ್ರಮುಖವಾದಂಥದ್ದು ಎಂದರೆ, ಉಚ್ಚ ನ್ಯಾಯಾಲಯದ ಗೌರವಾನ್ವಿತ ನ್ಯಾಯಾಧೀಶರಾದಂಥ ಜಸ್ಟೀಸ್ ಭಕ್ತವತ್ಸಲಂ ಮತ್ತು ಗೌರವಾನ್ವಿತ ನ್ಯಾಯಾಧೀಶರಾದಂಥ ಜಸ್ಟೀಸ್ ಗೋವಿಂದರಾಜುರವರು ಲೋಕಾಯುಕ್ತ ವರದಿಯನ್ನು ತಿರಸ್ಕರಿಸಿ ಮಾಡಿರುವಂಥ ವಿಮರ್ಶೆಯನ್ನು ಹೇಳುತ್ತೇನೆ. ಅದರಲ್ಲಿ ಅವರು ಹೇಳುತ್ತಾರೆ. "ಒಬ್ಬ ಮನುಷ್ಯನ ಪ್ರತಿಷ್ಠೆ ಸಮಾಜದಲ್ಲಿ ಬಹಳ ಮುಖ್ಯ. ಮನುಷ್ಯ ಅದನ್ನು ತನ್ನ ಜೀವನ ಪರ್ಯಂತ ಹೃದಯದಲ್ಲಿಟ್ಟುಕೊಂಡಿರುತ್ತಾನೆ. ಒಬ್ಬ ಮನುಷ್ಯ ಸಮಾಜದಲ್ಲಿ ಹೆಸರು ಮತ್ತು ಪ್ರತಿಷ್ಠೆಗಳಿಸಲು ತನ್ನ ಜೀವಮಾನವನ್ನೇ ಮುಡಿಪಾಗಿಡುತ್ತಾನೆ. ಆದ್ದರಿಂದ, ಒಬ್ಬ ಮನುಷ್ಯನನ್ನು ತಾನುಗಳಿಸಿದ ಹುದ್ದೆಯಿಂದ ತೆಗೆಯುವುದನ್ನು ತನ್ನ ವ್ಯಕ್ತಿ ಪ್ರತಿಷ್ಠೆಗೆ ಕಳಂಕವೆಂದು ಭಾವಿಸುತ್ತಾನೆ. ಸಂವಿಧಾನದ ಆರ್ಟಿಕಲ್ 21ರ ಪ್ರಕಾರ

ಪ್ರತಿ ನಾಗರಿಕನಿಗೂ ಮೂಲಭೂತ ಹಕ್ಕು ಸಂವಿಧಾನದಲ್ಲಿ ಖಾತರಿಯಾಗಿದೆ. ಆದ್ದರಿಂದ, ಯಾವುದೇ ಮನುಷ್ಯನ ಸಂವಿಧಾನಾತ್ಮಕ ಹಕ್ಕನ್ನು ಕಿತ್ತುಕೊಳ್ಳಲು ಸಾಧ್ಯವಿಲ್ಲ. ಯಡಿಯೂರಪ್ಪನವರನ್ನು ಜೈಲಿಗೆ ಕಳುಹಿಸುವ ವಿಚಾರದಲ್ಲಿ ರಾಜ್ಯಪಾಲರು ಮತ್ತು ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಲೋಕಾಯುಕ್ತರು ಸಾಮಾನ್ಯ ನ್ಯಾಯದ ಮೂಲ ತತ್ವವನ್ನು ಅನುಸರಿಸುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ಲೋಕಾಯುಕ್ತರು ನ್ಯಾಯ ಸ್ಥಾನದ ಅಧಿಕಾರ ಹೊಂದಿರುವುದರಿಂದ ಸಾಮಾನ್ಯ ನ್ಯಾಯದ ಕಾನೂನನ್ನು ಕಡ್ಡಾಯವಾಗಿ ಪಾಲಿಸಬೇಕು. ಲೋಕಾಯುಕ್ತರು ಸಂಭಾವಿತ ಅಪರಾಧಿಯ ಬಗ್ಗೆ ಅಪರಾಧಗಳ ವರದಿಯನ್ನು ಆಪಾದಿತರ ವಿಮರ್ಶೆಗೆ ಕಳುಹಿಸಿಕೊಡಬೇಕಾಗಿರುವುದು ಕಡ್ಡಾಯ".

ಆದರೆ ನನಗೆ ನೋಟಿಸೇ ಕೊಡಲಿಲ್ಲ. ಬೇರೆ ಎಲ್ಲ ಸಂದರ್ಭಗಳಲ್ಲೂ ಲೋಕಾಯುಕ್ತರು ಬೇರೆಯವರಿಗೆ ನೋಟಿಸ್ ಕಳುಹಿಸಿ, ಮಾಹಿತಿಯನ್ನು ಪಡೆದು, ತೀರ್ಮಾನವನ್ನು ತೆಗೆದುಕೊಂಡರೆ, ನನ್ನ ವಿಷಯದಲ್ಲಿ ಗೌಪ್ಯವಾಗಿ ಇಟ್ಟಿದ್ದರು. ನನಗೆ ವಿಷಯವೇ ಗೊತ್ತಿಲ್ಲ, ನೋಟೀಸೂ ಕೊಡಲಿಲ್ಲ. ಇದನ್ನು ಯಡಿಯೂರಪ್ಪನವರ ವಿಷಯದಲ್ಲಿ ಪಾಲಿಸಲಿಲ್ಲ ಎಂದು ಇಬ್ಬರು ನ್ಯಾಯಾಧೀಶರೂ ಹೇಳುತ್ತಾರೆ. 'ಲೋಕಾಯುಕ್ತ ಕಾಯಿದೆ 90/1, 9(3) (a) ಮತ್ತು (b) ಅಥವಾ Section 7(2)(a) ಪ್ರಕಾರ ವಿಚಾರಣೆಯಲ್ಲಿ ತಾರತಮ್ಯ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ, ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ 2007–2010ರ ಅವಧಿಯಲ್ಲಿ ಲೋಕಾಯುಕ್ತ ನೀಡಿರುವ ವಿವಾದಿತ ಕಂಪನಿಗಳಿಗೆ ಯಾವುದೇ ಅನುಕೂಲ ಮಾಡಿದ್ದಾರೆ ಎಂಬುದಕ್ಕೆ ಲೋಕಾಯುಕ್ತರು ಯಾವುದೇ ಆಧಾರವನ್ನು ಒದಗಿಸಿಲ್ಲ ನ್ಯಾಯಾಧೀಶರು ವಿಚಾರಣೆ ಸಂದರ್ಭದಲ್ಲಿ ನ್ಯಾಯಾಲಯದಲ್ಲಿ ಬಿ.ಎಸ್.ಯಡಿಯೂರಪ್ಪನವರು ವಿವಾದಿತ ಕಂಪನಿಗೆ ಯಾವುದೇ ಅನುಕೂಲ ಮಾಡಿರುವುದಕ್ಕೆ ಅವಶ್ಯಕ ದಾಖಲೆಗಳನ್ನು ಸಲ್ಲಿಸುವಂತೆ ಕೋರಿದರು. ಅದಕ್ಕೆ ಲೋಕಾಯುಕ್ತದಿಂದ ಯಾವುದೇ ಉತ್ತರವಿಲ್ಲ. ಸಂವಿಧಾನಾತ್ಮಕ ಹುದ್ದೆಯಲ್ಲಿರುವ ಒಬ್ಬ ವ್ಯಕ್ತಿಯ ಪ್ರತಿಷ್ಠೆ ಮತ್ತು ಪ್ರಖ್ಯಾತಿಯನ್ನು ಹಾಳು ಮಾಡಲು ಅನುಮಾನಾಸ್ಪದ ತೀರ್ಮಾನ ಸರಿಯಲ್ಲ. ನ್ಯಾಯಾಲಯ ಈ ಕಡತದ ಮೇಲೆ ತನ್ನ ತೀರ್ಮಾನವನ್ನು ಕೊಡುವುದು ಅವಶ್ಯಕವಾಗಿದೆ.' ಇದು ಬಹಳ important. 'ಲೋಕಾಯುಕ್ತರು

ತನ್ನ ವರದಿಯ ಕೆಲವು ಅಂಶಗಳನ್ನು ಪತ್ರಿಕೆಗೆ ಬಹಿರಂಗಪಡಿಸಿ ರಾಜಕೀಯ ರಂಗದಲ್ಲಿ ಮಾಲಿನ್ಯ ಉಂಟುಮಾಡಿದ್ದಾರೆ. ನೈತಿಕತೆಯಿಂದ ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಲೋಕಾಯುಕ್ತ ಮಾಡಿರುವ ಆಪಾದನೆಗಳಿಗೆ ಯಾವುದೇ ಸಾಕ್ಷ್ಯಾಧಾರಗಳನ್ನು ಲೋಕಾಯುಕ್ತ ನೀಡಿರುವುದಿಲ್ಲ. ಗಣಿಗಾರಿಕೆ ಕಾನೂನು 24.4.1960ರ ಪ್ರಕಾರ ಗಣಿಗಾರಿಕೆ ನೀಡುವುದು ಕೇಂದ್ರ ಸರ್ಕಾರದ ಹಕ್ಕು. ಆದ್ದರಿಂದ, ಬಿ.ಎಸ್.ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ತನ್ನ ಅವಧಿ 2007 ರಿಂದ 2010ರಲ್ಲಿ ವಿವಾದಿತ ಕಂಪನಿಗೆ ಅನುಕೂಲ ಮಾಡಿದ್ದಾರೆಂಬುದು ಲೋಕಾಯುಕ್ತರ ತಪ್ಪು ಗ್ರಹಿಕೆಯಾಗಿದೆ. ಲೋಕಾಯುಕ್ತ ವರದಿಯಲ್ಲಿ ಲೋಕಾಯುಕ್ತರು ಕಳುಹಿಸಿದ ಉಲ್ಲೇಖಕ್ಕೂ South West Mining company ಗೂ ಸಂಬಂಧವಿಲ್ಲ. ಲೀಕಾಯುಕ್ತ ವರದಿ ಸರ್ಕಾರ ವಹಿಸಿದ ಉಲ್ಲೇಖಕ್ಕೆ ಒಳಪಟ್ಟಿರುವುದಿಲ್ಲ. ಮೇಲಿನ ಎಲ್ಲಾ ವಿಷಯಗಳನ್ನು ಪರಿಗಣಿಸಿ ಲೋಕಾಯುಕ್ತ ದಿನಾಂಕ: 27.7.2011ರಲ್ಲಿ ಬಿ.ಎಸ್. ಯಡಿಯೂರಪ್ಪನವರ ವಿರುದ್ಧ ನೀಡಿದ ವರದಿಯನ್ನು ನ್ಯಾಯಾಲಯ ರೆದ್ದುಮಾಡಿದೆ.' ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಯಡಿಯೂರಪ್ಪನವರ ವಿರುದ್ಧ ಲೋಕಾಯುಕ್ತರು ನೀಡಿದ ವರದಿಯನ್ನು ರದ್ದುಪಡಿಸಬೇಕೆಂದು ಸರ್ವೋಚ್ಚ-ನ್ಯಾಯಾಲಯಕ್ಕೆ ಹೋದರು, ಸರ್ವೋಚ್ಚ ನ್ಯಾಯಾಲಯದಲ್ಲಿ ಮಾನ್ಯತೆ ಕೊಡಲಿಲ್ಲ. ಅಂದರೆ, ಈಗ ನ್ಯಾಯಾಲಯದ ತೀರ್ಪು ಬಂದಾಗ ದಿನಾಂಕ:7-3-2012ರಿಂದ ಲೋಕಾಯುಕ್ತ ವರದಿಯ ಆಪಾದನೆಯಿಂದ ನಾನು ಮುಕ್ತನಾಗಿದ್ದೇನೆ, ನಾನು ಅಪರಾಧಿಯಲ್ಲ. ಇದು ನ್ಯಾಯಾಲಯದ ಒಂದು ತೀರ್ಪು. ನಾನು ಇಲ್ಲಿ ಇಷ್ಟೊಂದು ವಿವರವಾಗಿ ಏಕೆ ಹೇಳುತ್ತಿದ್ದೇನೆಂದರೆ, ಇವತ್ತೂ ಸಹ ಅಧಿಕಾರಕ್ಕೆ ನಾನು ತಂದ ನಮ್ಮ ಪಕ್ಷದ ಮುಖಂಡರುಗಳು ಯಡಿಯೂರಪ್ಪ ಅಪರಾಧಿ, ಅಪರಾಧಿ ಅಪರಾಧಿ ಎಂದು ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವಂಥ ಪ್ರಯತ್ನ ಮಾಡುತ್ತಿದ್ದಾರೆ. ಮತ್ತೆ ಅವರ ಜೊತೆಯಲ್ಲಿ ಸ್ನೇಹ ಬೆಳೆಸುವುದಕ್ಕೆ ನಾನೇನೂ ಅಪೇಕ್ಷೆ ಪಡುವುದಿಲ್ಲ. At least, ವಾಸ್ತವಿಕ ಸತ್ಯಸಂಗತಿಯನ್ನಾದರೂ ತಿಳಿದುಕೊಂಡು ಈ ಪಕ್ಷವನ್ನು ಅಧಿಕಾರಕ್ಕೆ ತಂದಂಥವನನ್ನು ಹೊರದೂಡಿದ ಮೇಲೂ ಸಹ ಇನ್ನಾದರೂ ನಾನು ಗೌರವದಿಂದ ಬದುಕುವುದಕ್ಕಾದರೂ ಅವಕಾಶ ಮಾಡಿಕೊಡಿಯಪ್ಪ, ಇನ್ನಾದರೂ

ಈ ರೀತಿ ಆಪಾದನೆ ಮಾಡುವುದನ್ನು ನಿಲ್ಲಿಸಿ ಎಂದು ನಮ್ಮ ಸ್ನೇಹಿತರುಗಳಿಗೆ ಹೇಳುವುದಕ್ಕೋಸ್ಕರ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆಯೇ ಹೊರತು ಇದು ಕಾಂಗ್ರೆಸ್‌ನ ಸ್ನೇಹಿತರುಗಳಿಗಾಗಲಿ, ಅಥವಾ ಬೇರೆಯವರಿಗಾಗಲಿ ಅಲ್ಲ. ಎಲ್ಲಾ ನಮ್ಮವರನ್ನೇ ಕುರಿತು ನಾನು ಈ ಸಂದರ್ಭದಲ್ಲಿ ಈ ಮಾತನ್ನು ಹೇಳುವಂಥ ಪ್ರಯತ್ನ ಮಾಡಿದ್ದೇನೆ.

ಇನ್ನು ಲೋಕಾಯುಕ್ತ report ಬಗ್ಗೆ ಹೇಳುವುದಾದರೆ, ರಮೇಶ್ ಕುಮಾರ್‌ರವರೆ, ನೀವಿದ್ದರೆ ಏನು ಮಾಡುತ್ತಿದ್ದಿರಿ? ಲೋಕಾಯುಕ್ತ report ಬಂದಾಗ ಕಾನೂನಿನಂತೆ ಅದನ್ನು cabinet ಮುಂದೆ ಇಡಬೇಕು. cabinet ಮುಂದೆ ಇಡಲೇ ಇಲ್ಲ. ಇವತ್ತು report ಬಂತು, ಸಾಯಂಕಾಲ ಕರೆಸಿದರು, 48 ಗಂಟೆಯೊಳಗೆ ನನ್ನ ರಾಜೀನಾಮೆ ತೆಗೆದುಕೊಂಡರು. ಇನ್ನು ಯಾರಾದರೂ ಆ ಜಾಗದಲ್ಲಿದ್ದಿದ್ದರೆ, ನನಗೆ ಬಹುಮತ ಇದೆ, ರಾಜೀನಾಮೆ ಕೊಡುವುದಿಲ್ಲ ಎಂದು ಹೇಳಬಹುದಾಗಿತ್ತು. cabinet ನಲ್ಲಿ ಆ ವರದಿಯನ್ನು ಇಡುತ್ತೇನೆಂದು ಹೇಳಬೇಕಾಗಿತ್ತು. Advocate General ರವರ ಅಭಿಪ್ರಾಯವನ್ನು ಕೇಳುವಂಥ ಪ್ರಯತ್ನ ಮಾಡಬೇಕಾಗಿತ್ತು. ಸದಸ್ಯರ ಜೊತೆ ಸಮಾಲೋಚನೆ ಮಾಡಬೇಕಾಗಿತ್ತು. ಅದನ್ನು Assembly ಮುಂದೆ discussion ಗೆ ಇಡಬಹುದಾಗಿತ್ತು. ಈ ಪ್ರಯತ್ನ ಮಾರಬೇಕಾಗಿತ್ತು. ಇದೆಲ್ಲ ಆದಮೇಲೆ ಆ ವರದಿಯನ್ನು ಅನುಷ್ಠಾನಕ್ಕೆ ತರುವುದಕ್ಕೆ ಮುಖ್ಯಮಂತ್ರಿಗೆ ಗೊತ್ತಿದೆ 6 ತಿಂಗಳ ಸಮಯವಿದೆ. ಇಷ್ಟಾದರೂ ಸಹ ನನ್ನನ್ನು ಕೇವಲ ಮೂರು ದಿವಸಗಳಲ್ಲಿ ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿ ಅಪರಾಧಿ, ಅಪರಾಧಿ, ಅಪರಾಧಿ ಎಂದು ಹೇಳಿ ಬೊಬ್ಬೆ ಹೊಡೆದು ಈ ರಾಜ್ಯದ ಜನರ ಮುಂದೆ ನಾನು ತಲೆತಗ್ಗಿಸುವಂತೆ ಮಾಡಿದರು, ಇಂಥ ಕೆಲಸವನ್ನು ನಮ್ಮ ಸ್ನೇಹಿತರೇ ಮಾಡಿದರು. ಈ ಸತ್ಯ ಸಂಗತಿ ಈ ನಾಡಿನ ಜನರಿಗೆ ಗೊತ್ತಿರಲಿ ಎನ್ನುವುದಕ್ಕೋಸ್ಕರ ಇದನ್ನೆಲ್ಲಾ ನಾನು ಹೇಳಿದೆ. ಅದಕ್ಕೋಸ್ಕರವೇ ನಾನು ಸನ್ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಹೇಳಿರುವಂಥದ್ದು, ನೀವಾದರೂ ಸಂತೋಷ್ ಹೆಗ್ಡೆಯವರು ಕೊಟ್ಟಿರುವಂಥ ಈ ಲೋಕಾಯುಕ್ತ report ಅನ್ನು ಈ ಮನೆಯಲ್ಲಿ ಚರ್ಚೆ ಮಾಡುವುದಕ್ಕೆ ಇಟ್ಟರೆ ವಾಸ್ತವಿಕ ಸತ್ಯ ಸಂಗತಿಗಳು ಏನು ಮತ್ತು ಎಲ್ಲ ಸಂಗತಿಗಳೂ ಸಹ ಜನರಿಗೆ

ಅರ್ಥವಾಗುತ್ತದೆ ಎನ್ನುವುದಕ್ಕೋಸ್ಕರ ಈ ಸಂದರ್ಭದಲ್ಲಿ ಈ ಮಾತನ್ನು ನಾನು ಹೇಳುವುದಕ್ಕೆ ಇಚ್ಛಪಡುತ್ತೇನೆ.

ಇನ್ನು ಅಕ್ರಮ ಗಣಿಗಾರಿಕೆಯನ್ನು ತಡೆಯುವುದಕ್ಕೆ ನಾನು ಮಾಡಿದಂಥ ಪ್ರಯತ್ನಗಳನ್ನು ಹೇಳುತ್ತೇನೆ. ನಾನು ಅನೇಕ ಬಾರಿ ಕೇಂದ್ರ ಸರ್ಕಾರಕ್ಕೆ ಪತ್ರ ಬರೆದ. ಮಾನ್ಯ ಪ್ರಧಾನ ಮಂತ್ರಿಯವರನ್ನು ಮೂರು ನಾಲ್ಕು ಸಲ ಭೇಟಿ ಮಾಡಿದೆ. ಸಂಬಂಧಪಟ್ಟ ಸಚಿವರನ್ನು ಭೇಟಿ ಮಾಡಿದೆ. ಬಹುಶಃ ದಿನಾಂಕ 24.7.2010 ರಂದು ನಡೆದ National Development Council ಸಭೆಯಲ್ಲಿ ನಾನು ಭಾಷಣ ಮಾಡುತ್ತಾ ಪ್ರಧಾನಿಯವರ ಗಮನಕ್ಕೆ ತಂದಿದ್ದೇನೆ. "Need to ban export of iron ore. The issue of over exploitation of mines and illegal mining has been a major concern of all the mineral rich states in India. Despite efforts by various state governments, these problems are persisting across the states. A major reason is the indiscriminate export of iron ore and other such minerals. Unless certain curbs are placed on the export of iron ore etc., undue exploitation and illegal mining are likely to continue. The experts have warned not to allow mining activity to continue at the present rate. It will create ecological imbalance resulting in the large scale migration of people. It is extimated that nearly 58% pf the iron ore extracted in India is exported. There is an urgent need to arrest this trend. We have to find ways and means to create value addition within the country itself rather than blindly exhaust our natural resources through indiscriminate export." ಈ ಮಾತನ್ನು ನಾನು ಹೇಳಿಕೊಂಡೇ ಬಂದಿದ್ದೇನೆ, ನಾನು ಪ್ರಯತ್ನ ಮಾಡಿದೆ. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಇಷ್ಟೇ ವಿನಂತಿ ಮಾಡುವುದು, ಏನೆಂದರೆ, ಹೇಗಾದರೂ ಮಾಡಿ ಗಣಿಗಾರಿಕೆಗೆ ಯಾರ್ಯಾರ ಕಾಲದಲ್ಲಿ ಏನೇನು licence ಕೊಟ್ಟರು,

ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಎಷ್ಟು licence ಕೊಟ್ಟರು, ಇವೆಲ್ಲ ಮಾಹಿತಿಗಳನ್ನು ತಾವು ತಿಳಿದುಕೊಳ್ಳುವಂಥ ಪ್ರಯತ್ನವನ್ನು ಮಾಡಬೇಕು. ಬಹುಶಃ ನನಗೆ ಗೊತ್ತಿರುವ ಪ್ರಕಾರ, ನನ್ನ ಕಾಲದಲ್ಲಿ ಆ ರೀತಿ ಗಣಿಗಾರಿಕೆ, ಅಕ್ರಮ ಗಣಿಗಾರಿಕೆಯನ್ನು ಮಾಡುವುದಕ್ಕೆ ಅವಕಾಶವನ್ನು ನಾನು ಕೊಡಲಿಲ್ಲ. ಬಹಳ ಪ್ರಯತ್ನಪೂರ್ವಕವಾಗಿ ಅದನ್ನು ತಡೆಯುವಂಥ ಪ್ರಾಮಾಣಿಕ ಪ್ರಯತ್ನವನ್ನು ನಾನು ಮಾಡಿದ್ದೇನೆ ಈವರೆಗೆ ಅಕ್ರಮ ಗಣಿಗಾರಿಕೆಯಲ್ಲಿ ಯಡಿಯೂರಪ್ಪ ಭಾಗವಹಿಸಿದ್ದ ಎನ್ನುವುದಕ್ಕೆ ಯಾವುದೇ ರೀತಿಯ ಆಧಾರಗಳು ನನ್ನ ಮೇಲೆ ಇಲ್ಲ. ತಮಗೆ ಗೊತ್ತಿದೆ, ನಾನು ಇದನ್ನು ಆಪಾದನೆ ಮಾಡುವುದಕ್ಕೆ ಹೇಳುತ್ತಿಲ್ಲ. ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಪಟ್ಟಾ ಜಮೀನಿನಲ್ಲಿ ಅಕ್ರಮವಾಗಿ ಸಂಗ್ರಹಿಸಿದ್ದ ಕಬ್ಬಿಣದ ಅದಿರನ್ನು ಸಾಗಾಣಿಕೆ ಮಾಡುವುದಕ್ಕೆ permit

ಕೊಡುವುದಕ್ಕೆ ತೀರ್ಮಾನ ಕೈಗೊಂಡರು ಎನ್ನುವ ಕಾರಣಕ್ಕಾಗಿ 23.22 ಲಕ್ಷ ಕೋಟಿ ನಷ್ಟವಾಗಿದ್ದು ಅದನ್ನು ಧರ್ಮಸಿಂಗ್‌ರವರಿಂದ ವಸೂಲಿ ಮಾಡಬೇಕೆಂದು ಮಾಡಿದರು. ಶ್ರೀ ರಾಮೇಶ್ವರ ಠಾಕೂರ್‌ರವರು ಅದನ್ನು ರದ್ದು ಮಾಡಿದರು. ಈಗ ಅದು court ನಲ್ಲಿ ನಡೆಯುತ್ತಿದೆ. ಅದು ಬೇರೆ ವಿಷಯ. ನಾನು ಈ ಸಂದರ್ಭದಲ್ಲಿ ಯಾರೊಬ್ಬರನ್ನೂ ದೂರುವುದಕ್ಕೆ ಹೋಗುವುದಿಲ್ಲ. ರಾಜ್ಯಪಾಲರಾದಂಥ ರಾಮೇಶ್ವರ ಠಾಕೂರ್‌ರವರು ಈ ರೀತಿ ತೀರ್ಮಾನ ಕೈಗೊಳ್ಳುವ ಮುಂಚೆ ರಾಜ್ಯ ಸರ್ಕಾರವನ್ನೂ ಕೇಳಲಿಲ್ಲ, ಲೋಕಾಯುಕ್ತರ ಆದೇಶವನ್ನು ರದ್ದು ಮಾಡಿದರು. ಆದರೆ, ಯಡಿಯೂರಪ್ಪನ ವಿಷಯದಲ್ಲಿ ಈ ರಾಜ್ಯಪಾಲರು ಅವತ್ತಿನಿಂದಲೂ ನನ್ನನ್ನು ಕಂಡರೆ ಬಹಳ ಪ್ರೀತಿ ಇರುವವರು ಅವರು ಹೇಗಾದರೂ ಮಾಡಿ ನಾನಿದ್ದಾಗಲೇ ಈ ಸರ್ಕಾರವನ್ನು ಬೀಳಿಸಿ ಹೋಗಬೇಕು, ಏನಾದರೂ ಮಾಡಿ ಯಡಿಯೂರಪ್ಪನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಬೇಕೆಂದು ಬಹುಶಃ ನಮ್ಮ ರಾಜ್ಯಪಾಲರು, ನಮ್ಮ ಲೋಕಾಯುಕ್ತರು, ದೆಹಲಿಯ ನಮ್ಮ ನಾಯಕರು, ನಮ್ಮ ಸ್ನೇಹಿತರು ಎಲ್ಲಾ ಸೇರಿದ್ದರು. ಇವತ್ತು ಅವರು ಸಂತೋಷವಾಗಿ ಮುಂದಿನ ರಾಜ್ಯಕ್ಕೆ ಹೋಗಬಹುದೆಂದು ನಾನು ಅಂದುಕೊಂಡಿದ್ದೇನೆ. ಆ ಪ್ರಯತ್ನದಲ್ಲಿ ನಮ್ಮ ರಾಜ್ಯಪಾಲರು ಯಶಸ್ವಿಯಾದರು ಎನ್ನುವ ಮಾತನ್ನು ಮಾತ್ರ ನಾನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಅದಿರು ಸಾಗಾಣಿಕೆಗೆ fake permit ಅನ್ನು ಉಪಯೋಗಿಸುತ್ತಿದ್ದರು. ಆಗ bulk

permit ಕೊಡುವ ಪದ್ಧತಿ ಇತ್ತು. ಒಂದು permit ನಲ್ಲಿ 3–4 ಲೋಡ್ ಅದಿರು ಹೋಗುತ್ತಿತ್ತು. ಎಲ್ಲಿಯವರೆಗೆ ಹೋಗುತ್ತಿತ್ತು ಎಂದರೆ, ಮಾನ್ಯ ಅಧ್ಯಕ್ಷರೆ, ತಮಗೆ ಆಶ್ಚರ್ಯ ಆಗಬಹುದು, ತುಮಕೂರಿನಲ್ಲಿ, ಬಳ್ಳಾರಿಯಲ್ಲಿ, ಚಿತ್ರದುರ್ಗದಲ್ಲಿ, ಬರುತ್ತಿದ್ದ ಅದಿರು ಲಾರಿಗಳನ್ನು toll ನಲ್ಲಿ ನಿಲ್ಲಿಸಿ ಕಾನೂನು ಬಾಹಿರವಾಗಿ ಗಣಿಗಾರಿಕೆ ಮಾಡುತ್ತಿದ್ದಂಥವರು ಒಂದು load ಗೆ ಇಷ್ಟು ಎಂದು ಹಣ ಕೊಡುತ್ತಿದ್ದರು. ಆ ಹಣ ಯಾರಿಗೆ ಹೋಗುತ್ತಿತ್ತು ಎಂದರೆ ಅದು D.C.ಗೆ ಹೋಗುತ್ತಿತ್ತು. ಹತ್ತಾರು ಕೋಟಿ ರೂಪಾಯಿಗಳಷ್ಟು ಸಂಗ್ರಹವಾದ ದಾಖಲೆಗಳಿವೆ. ಅದನ್ನು ಅಭಿವೃದ್ಧಿ ಕಾರ್ಯಗಳಿಗಾಗಿ ಉಪಯೋಗಿಸುತ್ತಿದ್ದರು. ಆದರೆ, ಯಡಿಯೂರಪ್ಪ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ ರಾಜಾರೋಷವಾಗಿ fake permit ಅನ್ನು ಉಪಯೋಗಿಸಿಕೊಂಡು ಒಂದು permit ನಲ್ಲಿ 3–4 ಲೋಡ್ ಅದಿರು ಸಾಗಿಸಿ toll ನಲ್ಲಿ ಪ್ರತಿ ಲೋಡ್‌ಗೆ ಇಂತಿಷ್ಟು ಎಂದು ಹಣ ಕೊಟ್ಟು ಅದನ್ನೂ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಿಕೊಳ್ಳದೇ ಇರತಕ್ಕಂಥ ಕೆಳಮಟ್ಟಕ್ಕೆ ಆ ಕಾಲದಲ್ಲಿ ರಾಜಕಾರಣ ನಡೆಯಿತು ಎನ್ನುವಂಥದ್ದನ್ನು ಈ ಸಂದರ್ಭದಲ್ಲಿ ಬಹಳ ನೋವಿನಿಂದ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಈ ಎಲ್ಲವನ್ನೂ ತಡೆಯುವಂಥ ಪ್ರಯತ್ನ ಮಾಡಿದ್ದೇ ನಾನು ಮುಖ್ಯಮಂತ್ರಿ ಸ್ಥಾನದಿಂದ ಇಳಿಯುವುದಕ್ಕೆ ಕಾರಣವಾಯಿತು. ಭಾರತ ಸರ್ಕಾರಕ್ಕೆ ಗಣಿಗಾರಿಕೆಗೆ recommend ಮಾಡಿರುವುದರಲ್ಲಿ ಶ್ರೀ ಎಸ್.ಎಂ.ಕೃಷ್ಣರವರ ಕಾಲದಲ್ಲಿ 16ಕ್ಕೆ recommend ಆಯಿತು 16ಕ್ಕೂ clearance ಸಿಕ್ಕಿತು. ಶ್ರೀ ಧರ್ಮಸಿಂಗ್‌ರವರ ಕಾಲದಲ್ಲಿ 43ಕ್ಕೆ permission ಗೆ ಬರೆದಿದ್ದರು, ಅದರಲ್ಲಿ 37ಕ್ಕೆ ಕೇಂದ್ರ ಸರ್ಕಾರದಿಂದ permission ಸಿಕ್ಕಿತು. ಕುಮಾರಸ್ವಾಮಿಯವರ ಕಾಲದಲ್ಲಿ 47 ಕ್ಕೆ permission ಕೇಳಿದ್ದರು ಅದರಲ್ಲಿ 22ಕ್ಕೆ permission ಸಿಕ್ಕಿತ್ತು. ರಾಮೇಶ್ವರ ಠಾಕೂರ್‌ರವರ ಕಾಲದಲ್ಲಿ 22ಕ್ಕೆ permission ಕೇಳಿದ್ದರು ಅದರಲ್ಲಿ 14ಕ್ಕೆ permission ಸಿಕ್ಕಿತ್ತು. ಯಡಿಯೂರಪ್ಪನವರ ಕಾಲದಲ್ಲಿ ಕೇಂದ್ರ ಸರ್ಕಾರದಿಂದ ಅನುಮತಿ ಸಿಕ್ಕಿದ್ದು 3ಕ್ಕೆ ಮಾತ್ರ. ನನ್ನ ಕಾಲದಲ್ಲಿ ಅಕ್ರಮ ಗಣಿಗಾರಿಕೆಗೆ ಅವಕಾಶ ಕೊಡಲಿಲ್ಲ, value added ಎಂದು ನಾನು ಬಡಿದುಕೊಂಡೆ, valued added ಗೆ ಮಾತ್ರ recommend ಮಾಡುತ್ತೇನೆಂದು ಹೇಳಿದೆ, export ನ್ನು ರದ್ದು ಮಾಡಿದೆ,

High Court, Supreme Court ವರೆಗೆ ಹೋದರು, ಕೇಂದ್ರ ಸರ್ಕಾರದ ಅನುಮತಿ ಇಲ್ಲದೆ export ರದ್ದು ಮಾಡುವುದಕ್ಕೆ ಬರುವುದಿಲ್ಲವೆಂದು ಇತ್ತು, ಇಷ್ಟಾದರೂ ಯಡಿಯೂರಪ್ಪನವರು ಮಾಡಿದ್ದನ್ನು High Court, Supreme Court ಎತ್ತಿ ಹಿಡಿಯಿತು. ಅಕ್ರಮ ಗಣಿಗಾರಿಕೆಯನ್ನು ತಡೆಯುವುದಕ್ಕೆ ರಾಜ್ಯ ಸರ್ಕಾರ ತೆಗೆದುಕೊಂಡಿರುವಂಥ ತೀರ್ಮಾನಗಳು ಸರಿ ಇದೆ ಎಂದು ಹೇಳಿತು. ನಂತರ ಹೊಸದಾಗಿ ಗಣಿ ನೀತಿಯನ್ನು ಜಾರಿಗೆ ತಂದೆವು. Bulk permit ಕೊಡುವುದನ್ನು ನಿಲ್ಲಿಸಿದೆ. e-permit ಗಳ ಅನುಷ್ಠಾನ ಮತ್ತೆ ಖಾಸಗಿ ದಾಸ್ತಾನುಗಳಲ್ಲಿ ಸಂಗ್ರಹವಾಗಿರುವ ಅದಿರಿನ ತಪಾಸಣೆಯನ್ನು ** ಚೆಕ್ ಪೋಸ್ಟ್‌ಗಳಲ್ಲಿ ಎಲ್ಲಾ ಸಮಯದಲ್ಲಿಯೂ ಕಂಪ್ಯೂಟರ್ ಆಧಾರಿತ ನಿಯಂತ್ರಣ ಮಾಡುವ ಪ್ರಯತ್ನ ಮಾಡಿದೆ. 2009–10 ರಲ್ಲಿ ಸಂಗ್ರಹಿಸಲಾಗಿದ್ದಂಥ ಕಬ್ಬಿಣದ ಅದಿರಿನ ರಾಜಸ್ವ ಮೊತ್ತ 319 ಕೋಟಿ 59 ಲಕ್ಷ. 2010–11 ರಲ್ಲಿ 434.76 ಕೋಟಿ. ಕಳೆದ 11 ವರ್ಷಗಳಲ್ಲಿ ತಿಮ್ಮಪ್ಪನ ಗುಡಿ ಕಬ್ಬಿಣದ ಅದಿರು ಗಣಿಯಲ್ಲಿ ಗಣಿಗಾರಿಕೆ ನಡೆಸಿ 9.25 ಮಿಲಿಯನ್ ಟನ್‌ಕಬ್ಬಿಣದ ಅದಿರಿನ ಪುಡಿಯನ್ನು ಉತ್ಪಾದಿಸಿ ಕಡಿಮೆ ಅಧಿಮೌಲ್ಯ ಶೇಕಡ 6% premium 2001 ರಿಂದ 2009–10ರವರೆಗೆ ಕೇವಲ 69 ಕೋಟಿ 90 ಲಕ್ಷರೂಪಾಯಿ ಸಂಗ್ರಹವಾಗಿತ್ತು. ಆದರೆ, 1997 ರಲ್ಲಿ ದೋಷಪೂರಿತ ಒಡಂಬಡಿಕೆಯಿಂದಾಗಿ MMLಸಂಸ್ಥೆಗೆ 1997 ರಿಂದ 2007–08 ರವರೆಗೆ ಸುಮಾರು 917 ಕೋಟಿ 31 ಲಕ್ಷ ಹಾನಿಯಾಯಿತು. ಈ ರೀತಿಯಲ್ಲಿ ವರದಿಯಲ್ಲಿ ಬಂದಿರುವಂತಹದು. ಮನೆಯಲ್ಲಿ ಮುಖ್ಯಮಂತ್ರಿಗಳಾಗಿ ಅಲ್ಲಿ ಕುಳಿತು ಅಕ್ರಮ ಗಣಿಗಾರಿಕೆಯನ್ನು ತಡೆಯಬೇಕೆಂದು ನಾನು ಮತ್ತು ಸನ್ಮಾನ್ಯ ಕುಮಾರಸ್ವಾಮಿಯವರು Lokayuktaರಿಗೆ ಬಹಳಷ್ಟು ಪ್ರಯತ್ನಗಳನ್ನು ಮಾಡಿದೆವು. ಕುಮಾರಸ್ವಾಮಿಯವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ನಾನು ಉಪ ಮುಖ್ಯಮಂತ್ರಿ ಆಗಿದ್ದೆ. 2006–07 ರಲ್ಲಿ ರಾಜಸ್ವ 350 ಕೋಟಿ ಅಂದಾಜು ಇದ್ದರೆ 366 ಕೋಟಿ ಸಂಗ್ರಹವಾಯಿತು. 2007–08 ರಲ್ಲಿ ನಾನು ಮುಖ್ಯಮಂತ್ರಿಯಾದರೆ. ಆಗ 600 ಕೋಟಿ, 2008–09 ರಲ್ಲಿ 632 ಕೋಟಿ ಸಂಗ್ರಹವಾಗಬೇಕಾಗಿತ್ತು ಅದರಲ್ಲಿ 556 ಕೋಟಿ ಸಂಗ್ರಹವಾಯಿತು. 2009–10 ರಲ್ಲಿ 670 ಕೋಟಿ ರೂಪಾಯಿಗಳ ಮುಂಗಡ ಪತ್ರದ ಅಂದಾಜು ಇತ್ತು. 859 ಕೋಟಿ ಸಂಗ್ರಹ ಮಾಡಿದೆವು. 2010–11 ರಲ್ಲಿ 1,000 ಕೋಟಿ

ಎಂದು ನಾನು ಅಂದಾಜು ಮಾಡಿದ್ದೆ 1,185.96 ಕೋಟಿ ಸಂಗ್ರಹಣೆ ಮಾಡಿದೆವು. ಅಂದರೆ, ನಾನು ಮುಖ್ಯಮಂತ್ರಿಯಾದ ಮೇಲೆ 6% ಇದ್ದಂಥ premiumಅನ್ನು 50%ಗೆ ಹೆಚ್ಚು ಮಾಡಿದ ಮೇಲೆ ಯಾವ ರೀತಿ ಏರಿಕೆಯಾಯಿತು ಎಂದು ಹೇಳಿದೆ. 2007–08 ರಲ್ಲಿ 475.52 ಕೋಟಿ ರೂಪಾಯಿಗಳ ರಾಜಸ್ವ ಇದ್ದಂಥದ್ದು 2010–11 ರಲ್ಲಿ 1,174.58 ಕೋಟಿ ರಾಜಸ್ವ ಸಂಗ್ರಹವಾಯಿತು. ನಾನು ಇಂದು ಮಾನ್ಯ ಅಧ್ಯಕ್ಷರೆ, ನಿಮ್ಮ ಮೂಲಕ ಇಂದಿನ ಸರ್ಕಾರವನ್ನು ಕೇಳುತ್ತೇನೆ. ಆ ಸಂದರ್ಭದಲ್ಲಿ ರಕ್ಷಣೆ ಕೊಟ್ಟುಕೊಂಡು ಬಂದವರು ಯಾರು? 6% premium ಗೆ ಒಪ್ಪಿಕೊಂಡು ಬಂದಂತಹವರು ಯಾರು? ಯಡಿಯೂರಪ್ಪ ಬಂದ ಮೇಲೆ 6% ಇದ್ದದ್ದನ್ನು 50%ಗೆ ಮಾಡಿ ಸಾವಿರಾರು ಕೋಟಿ ರೂಪಾಯಿಗಳ ಆದಾಯ ಸಂಗ್ರಹಣೆ ಮಾಡುವುದೇ ಅಪರಾಧವೇ? ಅದಕ್ಕಾಗಿಯೇ ನನ್ನನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದಿರಾ? ಈ ಬಗ್ಗೆಯೂ ಸಹ ನಾವು ಚರ್ಚೆ ಮಾಡಬೇಕಾಗಿದೆ. ಬಹುಶಃ ಕನಿಷ್ಠ ಸ್ವಾಭಾವಿಕ ನ್ಯಾಯ ಕೊಡುವಂಥ ಸೌಜನ್ಯವನ್ನೂ ಸಹ ಲೋಕಾಯುಕ್ತರು ನನ್ನ ದೃಷ್ಟಿಯಿಂದ ಮಾಡಲಿಲ್ಲ. ಇವೆಲ್ಲವೂ ಸಹ ಹಿಂದೆ ನಡೆದಂಥ ಕರ್ಮ ಕಥೆಗಳು ಇದನ್ನು ಹೆಚ್ಚು ಹೇಳುವುದಕ್ಕೆ ಇಚ್ಛೆಪಡುವುದಿಲ್ಲ, ಇದೊಂದು ನನ್ನ ಕರ್ಮಕಥೆಯನ್ನು ಈ ವೇದಿಕೆ ಉಪಯೋಗಿಸಿಕೊಂಡು ಹೇಳಬೇಕು, ಆ ಮೂಲಕ ಸತ್ಯ ಸಂಗತಿಗಳು ಏನೆಂದು ಜನರಿಗೆ ಗೊತ್ತಾಗಬೇಕು ಎನ್ನುವ ದೃಷ್ಟಿಯಿಂದ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ನಾನು ಇಲ್ಲಿ ಒಂದು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನನ್ನ ಮೂರೂಕಾಲು ವರ್ಷಗಳಲ್ಲಿ ನಾವೇನು ರಾಜ್ಯದಲ್ಲಿ ಸಾಧನೆ ಮಾಡಿದ್ದೇವೆ, ಮತ್ತು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳುತ್ತೇನೆ, ನಿಮ್ಮ ಐದು ವರ್ಷಗಳ ಕಾಲ ಪೂರ್ಣ ಅಧಿಕಾರವಧಿಯಾದ ಮೇಲೆ ಅಂಕಿ ಅಂಶ ಕೊಡಿ, ಚರ್ಚೆ ಮಾಡೋಣ. ಈ ಮೂರೂ ಕಾಲು ವರ್ಷಗಳಲ್ಲಿ ಆಗಿರುವಂಥ ಸಾಧನೆಗಳೇನು? ನಾಳೆ ಬರುವಂಥ ದಿವಸಗಳಲ್ಲಿ ನೀವು ಮಾಡುವಂಥ ಸಾಧನೆ ಏನು ಎಂಬುದರ ಬಗ್ಗೆ ತುಲನೆ ಮಾಡಿ, ಇದೇ ಮನೆಯಲ್ಲಿ ಚರ್ಚೆ ಮಾಡೋಣ. ಕೊನೆಯಲ್ಲಿ ಅಂದರೆ ನಾಲ್ಕು ವರ್ಷಗಳ ನಂತರ ಇದೇ ಮನೆಯಲ್ಲಿ ನಾನು ಮತ್ತು ನೀವು ಇರುತ್ತೇವೆ. ಸನ್ಮಾನ್ಯ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಹಣಕಾಸಿನ ಸಚಿವರಾಗಿದ್ದಾಗ 19 ನೇ ಜುಲೈ, 2004 ರಲ್ಲಿ ಮಂಡನೆ ಮಾಡಿದ ಬಜೆಟ್

25,590 ಕೋಟಿ. 11–03–2005 ರಲ್ಲಿ ಮಂಡನೆ ಮಾಡಿದ ಬಜೆಟ್ 29,685 ಕೋಟಿ. 20–03–2006 ರಲ್ಲಿ ನಾನು ಮಂಡನೆ ಮಾಡಿದ ಬಜೆಟ್ 35,986 ಕೋಟಿ. 2007ರಲ್ಲಿ ಅದು 46,860 ಕೋಟಿಯಾಯಿತು. 2008ರಲ್ಲಿ ಅದು 47,241 ಕೋಟಿಯಾಯಿತು. 2009 ರಲ್ಲಿ 46,406 ಕೋಟಿಯಾಯಿತು. 05–03–2010ರಲ್ಲಿ 57,785 ಕೋಟಿಯಾಯಿತು. ಫೆಬ್ರವರಿ 2011 ರಲ್ಲಿ ನಾನು ಬಜೆಟ್ ಮಂಡನೆ ಮಾಡಿದಾಗ ಅದು 86,254 ಕೋಟಿಯಾಯಿತು. ನಾನು 86,254 ಕೋಟಿ ರೂಪಾಯಿಗಳ ಬಜೆಟ್‌ನ್ನು ಮಂಡಿಸಿದ್ದೆ. ಮುಂದಿನ ಬಜೆಟ್‌ನ್ನು ಒಂದು ಲಕ್ಷ ಕೋಟಿ ಬಜೆಟ್ ಮಂಡನೆ ಮಾಡುತ್ತೇನೆಂದು ಹೇಳಿದ್ದೆ. ಅಷ್ಟೊತ್ತಿಗೆ ಬೇರೆ ಬೇರೆ ವಿಶೇಷವಾದ ಕಾರಣಕೋಸ್ಕರ ನಾನು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಯಿತು. ಆದರೆ, ಹಣಕಾಸಿನ ನಿರ್ವಹಣೆ ಎಷ್ಟು ಚೆನ್ನಾಗಿತ್ತು ಎಂದರೆ, ನನ್ನ ನಂತರ ಬಂದಂತಹವರು ಒಂದು ಲಕ್ಷ ಕೋಟಿಗಿಂತಲೂ ಹೆಚ್ಚಿನ ಬಜೆಟ್‌ನ್ನು ಮಂಡನೆ ಮಾಡಿದರು. ಇದು ಕರ್ನಾಟಕ ರಾಜ್ಯದ ಇತಿಹಾಸ. ಅಂದರೆ ಒಂದು ಪೈಸೆಯೂ ಹೊಸ ತೆರಿಗೆ ಹಾಕಿದೆ, ಸೋರಿಕೆ ತಡೆದು, ಖಜಾನೆ ತುಂಬಿ ಈ ರಾಜ್ಯದಲ್ಲಿ ಇಷ್ಟೊಂದು ಅಭಿವೃದ್ಧಿ ಕಾರ್ಯಗಳು ಆಗುವುದಕ್ಕೆ ನಾನು ಅವಕಾಶ ಮಾಡಿಕೊಟ್ಟೆ. ನಿನ್ನೆ ಮಾತನಾಡುವಾಗ ಒಂದು ಮಾತನ್ನು ಹೇಳಿದೆ, ಮಾನ್ಯ ಮುಖ್ಯಮಂತ್ರಿಗಳು ಇದ್ದರೋ ಇಲ್ಲವೋ ಗೊತ್ತಿಲ್ಲ. ಡಾ:ನಂಜುಂಡಪ್ಪನವರ ವರದಿಯ ಪ್ರಕಾರ 114 ತಾಲ್ಲೂಕುಗಳಲ್ಲಿ 39 ತಾಲ್ಲೂಕುಗಳು further classified as most backward,40 ತಾಲ್ಲೂಕುಗಳು more backward,35 backward ಎಂದು 114 ತಾಲ್ಲೂಕು ಏನಿದೆ, ತಾವು ದಯಮಾಡಿ ನೋಡಿ. ಡಾ:ನಂಜುಂಡಪ್ಪನವರ ವರದಿ ಕೊಡಬೇಕಾದರೆ ಮುಂದುವರಿದ ತಾಲ್ಲೂಕುಗಳೆಂದು ಅವರು ಕೆಲವು ಮಾನದಂಡಗಳನ್ನು ಇಟ್ಟುಕೊಂಡಿದ್ದರು. ಇವತ್ತು ನೀವು ಹೋಲಿಕೆ ಮಾಡಿ ನೋಡಿ. ಮಾನ್ಯ ರಮೇಶ್ ಕುಮಾರ್‌ರವರೆ, 114 ತಾಲ್ಲೂಕುಗಳಲ್ಲಿ ಸುಮಾರು 75 ತಾಲ್ಲೂಕುಗಳಾದರೂ ಅದಕ್ಕೆ ಸರಿ ಸಮಾನವಾಗಿ ಅಭಿವೃದ್ಧಿಯಾಗಿವೆ. ರಾಯರೆಡ್ಡಿಯವರೆ, ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಏನೂ ಅಭಿವೃದ್ಧಿ ಮಾಡಲಿಲ್ಲ, ಎಲ್ಲಾ ಹಿನ್ನಡೆಯಾಯಿತು ಎಂಬ ಈ ಭಾವನೆ ಸರಿಯಲ್ಲ, ರಾಜ್ಯದ ಜನರಿಗೆ ತಪ್ಪು ಗ್ರಹಿಕೆ ಆಗಬಾರದು ಎನ್ನುವುದರ ಸಲುವಾಗಿ ತಾವು ಗಮನಿಸಬೇಕೆಂದು ಈ

ಒಂದು ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರೆ, ಕೇಂದ್ರ ಸರ್ಕಾರ 20 ಅಂಶಗಳ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಇಡೀ ದೇಶದಲ್ಲಿ ನಮ್ಮ ಸರ್ಕಾರ ಇದ್ದಾಗ ನಾವು ಎರಡನೇ ಸ್ಥಾನದಲ್ಲಿದ್ದೆವು. ಗ್ರಾಮ ಪಂಚಾಯಿತಿಗಳ ಸಬಲೀಕರಣಕ್ಕೆ ಕೇಂದ್ರ ಸರ್ಕಾರದಿಂದ ಪ್ರಥಮ ಪ್ರಶಸ್ತಿ ಬಂತು. NREGಯೋಜನೆಯ ಅನುಷ್ಠಾನಕ್ಕೆ ಧಾರವಾಡ, ಬೆಳಗಾವಿ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ಕೇಂದ್ರ ಸರ್ಕಾರದ ಪ್ರಶಸ್ತಿ ಬಂತು. ನಾವು PMGSY ಯ ಅನುಷ್ಠಾನದಲ್ಲಿಯೂ ಕೂಡ ಇಡೀ ದೇಶದಲ್ಲಿ ಎರಡನೇ ಸ್ಥಾನದಲ್ಲಿದ್ದೆವು. ಕಳೆದ ಮೂರು ವರ್ಷಗಳಲ್ಲಿ KSRTCಮತ್ತಿತ್ತರ ಸಾರ್ವಜನಿಕ ಸಾರಿಗೆ ಸಂಸ್ಥೆಗಳಿಗೆ ಕೇಂದ್ರ ಸರ್ಕಾರದಿಂದ 30 ಪ್ರಶಸ್ತಿಗಳು ಬಂದವು. 2009ನೇ ಸಾಲಿಗಾಗಿ ಅತ್ಯುತ್ತಮ ಸಾರ್ವಜನಿಕ ಸೇವೆಗಾಗಿ ಪ್ರಧಾನ ಮಂತ್ರಿಗಳ ಪ್ರಶಸ್ತಿ ಬಂತು. KUIDFCನಿಂದ ಈ ಐದು ಜಿಲ್ಲೆಗಳಲ್ಲಿ ಸರ್ಕಾರ ಮತ್ತು ಖಾಸಗಿ ಸಹಭಾಗಿತ್ವದ ಯೋಜನೆಗಳಲ್ಲಿ ರಾಷ್ಟ್ರೀಯ ಸಾಗರ ನೀರು ಪ್ರಶಸ್ತಿ 2009 ರಲ್ಲಿ ನಮಗೆ ಬಂತು. ಸುಜಲಾ ಯೋಜನೆಗಾಗಿ ರಾಷ್ಟ್ರೀಯ ನೀರು ಪ್ರಶಸ್ತಿ ಸಿಕ್ಕಿತು. ಪಂಚತಂತ್ರ ತತ್ರಾಂಶ ಅನುಷ್ಠಾನಕ್ಕೆ National e-governance ಪ್ರಶಸ್ತಿ ನಮಗೆ ಸಿಕ್ಕಿತು. Panchyath Empowerment and Accountability ಯೋಜನೆಯಲ್ಲಿ ರಾಷ್ಟ್ರ ಮಟ್ಟದಲ್ಲಿ ನಾವು ದ್ವೀತಿಯ ಸ್ಥಾನಕ್ಕೆ ಬಂದೆವು. ಮಳೆಯಾಶ್ರಿತ ಕೃಷಿ ಸುಜಲಾ ಜಲಾನಯನ ಯೋಜನೆಯಡಿಯಲ್ಲಿ ಮೂರು ರಾಷ್ಟ್ರೀಯ ಪ್ರಶಸ್ತಿಗಳು ನಮಗೆ ಬಂತು. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮಕ್ಕೆ ಕೇಂದ್ರ ಸರ್ಕಾರದ ಕಾರ್ಯಕ್ಷಮತ ಪ್ರಶಸ್ತಿಯಲ್ಲಿ first rank ನ್ನು ನಾವು ಪಡೆಯುವಲ್ಲಿ ಯಶಸ್ವಿಯಾದೆವು. ಅದೇ ರೀತಿಯಾಗಿ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಲ್ಲಿ ರಾಷ್ಟ್ರ ಮಟ್ಟದಲ್ಲಿ ಕಾಮಗಾರಿಗಳ ಗುಣಮಟ್ಟದಲ್ಲಿ ಪ್ರಥಮ ಸ್ಥಾನ, ಅನುಷ್ಠಾನದಲ್ಲಿ ದ್ವೀತಿಯ ಸ್ಥಾನ ಪಡೆದುಕೊಂಡೆವು. ನಾನು ಡಾ:ನಂಜುಂಡಪ್ಪನವರ ವರದಿಯ ಬಗ್ಗೆ ಹೇಳಿದ್ದೆ. ಸನ್ಮಾನ್ಯ ಮುಖ್ಯಮಂತ್ರಿಗಳೆ, ನೀವೂ ಕೂಡ ಸರ್ವರಿಗೂ ಸಮಪಾಲು ಸರ್ವರಿಗೂ ಸಮಬಾಳು, ಸಾಮಾಜಿಕ ನ್ಯಾಯ ಈ ಬಗ್ಗೆ ಮಾತನಾಡುತ್ತೀರಿ. ನೀವು ಯಶಸ್ವಿಯಾಗಿ ಮಾಡಿ. ನಾನು ನಿಮ್ಮಲ್ಲಿ ಒಂದೇ ಒಂದು ವಿನಂತಿ ಮಾಡುತ್ತೇನೆ. ಯಡಿಯೂರಪ್ಪ ಉಪ ಮುಖ್ಯಮಂತ್ರಿಯಾಗಿದ್ದಾಗ ಮತ್ತು

ಮುಖ್ಯಮಂತ್ರಿಯಾಗಿದ್ದ ಈ ಅವಧಿಯಲ್ಲಿ ಯಾವುದಾರೂ ಒಂದು ಸಮಾಜಕ್ಕೆ ನನ್ನಿಂದ ವಂಚನೆಯಾಯಿತು, ಯಡಿಯೂರಪ್ಪನವರೆ, ಕ್ರಿಶ್ಚಿಯನ್ ಸಮಾಜಕ್ಕೆ ಅನ್ಯಾಯವಾಯಿತು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಸಮಾಜಕ್ಕೆ ಅನ್ಯಾಯವಾಯಿತು, ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ಅನ್ಯಾಯವಾಯಿತು, ಎನ್ನುವ ಬಗ್ಗೆ ಒಂದು ಉದಾಹರಣೆ ಕೊಟ್ಟರೆ ನಾನು ರಾಜಕೀಯದಿಂದ ನಿವೃತ್ತನಾಗುತ್ತೇನೆ.

ಅತ್ಯಂತ ಪ್ರಾಮಾಣಿಕವಾಗಿ ನಾನು ಅದೇ ಪಕ್ಷದಲ್ಲಿದ್ದು, ಮಾನ್ಯ ಜಯಪ್ರಕಾಶ ನಾರಾಯಣ್‌ರವರ ವಿಚಾರ ಮಹಾತ್ಮ ಗಾಂಧಿಯವರ ವಿಚಾರ, ಡಾ॥ ಅಂಬೇಡ್ಕರ್‌ವರ ವಿಚಾರಗಳೆಲ್ಲವನ್ನೂ ನಾನು ಮನಸ್ಸಿನಲ್ಲಿಟ್ಟುಕೊಂಡು ಪ್ರಾಮಾಣಿಕನಾಗಿ ನನ್ನಂಥ ಒಬ್ಬ ಸಾಮಾನ್ಯ ರೈತನ ಮಗ ಉಪ ಮುಖ್ಯಮಂತ್ರಿ ಮತ್ತು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಎಲ್ಲ ವರ್ಗದ ಜನರಿಗೆ ಅಂದರೆ, ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಸಾಮಾಜಿಕ ನ್ಯಾಯದ ಆಧಾರದ ಮೇಲೆ ಆಡಳಿತವನ್ನು ನಡೆಸಿದ್ದೇನೆ. ರಾಜ್ಯದಲ್ಲಿ ಮೊದಲ ಬಾರಿಗೆ ಕ್ರಿಶ್ಚಿಯನ್ ಸಮುದಾಯಕ್ಕೆ 50 ಕೋಟಿ ರೂಪಾಯಿಯನ್ನು ನಾನು ಕೊಟ್ಟಿದ್ದೇನೆ. ಆರ್ಥಿಕ ಸ್ಥಿತಿ ಸುಧಾರಣೆಯಲ್ಲಿ ನಾವು ದೇಶದಲ್ಲಿಯೇ ಎರಡನೇ ಸ್ಥಾನದಲ್ಲಿದ್ದೆವು. ಇದನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡಿದೆ. ಹಿಂದುಳಿದ ವರ್ಗಕ್ಕೆ 2004–05 ರಿಂದ 2007–08ರವರೆಗೆ 617 ಕೋಟಿ ರೂಪಾಯಿ ನೀವು ಖರ್ಚು ಮಾಡಿದ್ದೀರಿ. ಆದರೆ, 2008–09 ರಿಂದ 2011–12ರವರೆಗೆ 2459 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. ಬೇಕಾದರೆ ಅಂಕಿ–ಅಂಶಗಳನ್ನು ತೆಗೆಸಿ ನೋಡಿ. ಎಸ್‌ಸಿ:ಎಸ್‌ಟಿ ಜನಾಂಗಕ್ಕೆ 2003–04 ರಿಂದ 2006–07ರವರೆಗೆ ಟಿಎಸ್‌ಪಿ ಯೋಜನೆ ಅಡಿಯಲ್ಲಿ 865 ಕೋಟಿ ಮತ್ತು ಎಸ್‌ಸಿಪಿ ಯೋಜನೆ ಅಡಿಯಲ್ಲಿ 3099 ಕೋಟಿ ರೂಪಾಯಿ ಕೊಟ್ಟಿದ್ದೀರಿ. ನನ್ನ ಕಾಲದಲ್ಲಿ ಟಿಎಸ್‌ಪಿ ಯೋಜನೆಗೆ 5,618 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಅದೇ ರೀತಿಯಾಗಿ ಎಸ್‌ಸಿಪಿ 14,140 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಬಹುಶಃ ಈ ದೇಶದ ಇತಿಹಾಸದಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡಿದಂಥ ರಾಜ್ಯ ಬೇರೊಂದು ಇಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ತಾವು ಅಂಕಿ–ಅಂಶಗಳನ್ನು ಪರಿಶೀಲನೆ ಮಾಡಬಹುದು. ಹಜ್ ಭವನ

ಕಟ್ಟುವುದಕ್ಕೆ ಹಣ ಕೊಟ್ಟಿದ್ದೇನೆ. ಯಡಿಯೂರಪ್ಪ ಬಿಜೆಪಿ ಪಕ್ಷದಲ್ಲಿದ್ದಾನೆ. ಆತ ಅಲ್ಪಸಂಖ್ಯಾತರ ವಿರೋಧಿ ಎಂದು ಹೇಳಿದ್ದರು. ಆದರೆ, ಹಜ್ ಭವನ ಕಟ್ಟುವುದಕ್ಕೆ 10 ಎಕರೆ ಭೂಮಿಯನ್ನು ಕೊಟ್ಟು 10 ಕೋಟಿ ರೂಪಾಯಿ ಕೊಟ್ಟಿದ್ದೇವೆ. ಹಿಂದಿನ ನಾಲ್ಕು ವರ್ಷಗಳಲ್ಲಿ ನೀವು 137 ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಆದರೆ, ನನ್ನ ಅವಧಿಯಲ್ಲಿ ಅಲ್ಪಸಂಖ್ಯಾತರಿಗೋಸ್ಕರ 850 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಅತಿವೃಷ್ಟಿಯಿಂದ ಜನ ಸಂಕಷ್ಟದಲ್ಲಿದ್ದಾಗ ಸುಮಾರು 30 ರಿಂದ 35 ಸಾವಿರ ರೂಪಾಯಿ ಪರಿಹಾರವನ್ನು ಕೊಟ್ಟು 58 ಸಾವಿರ ಮನೆಗಳನ್ನು ಕಟ್ಟುವುದಕ್ಕೋಸ್ಕರ ರೈತರಿಂದ ಜಮೀನನ್ನು ಪಡೆದುಕೊಂಡಿದ್ದೇವೆ. ಇನ್ನು ಕೆಲವು ಸಾವಿರ ಮನೆಗಳು ಉಳಿದುಕೊಂಡಿರಬಹುದು. ಆದರೆ, ಅವರಿಗೆ ಒಂದು ರೀತಿಯಲ್ಲಿ ನವನಗರವನ್ನು ನಿರ್ಮಾಣ ಮಾಡಿ ಶೌಚಾಲಯ ಕಟ್ಟಿಸಿ ಅಲ್ಲಿ ಟಾರ್ ರಸ್ತೆಗಳನ್ನು ನಿರ್ಮಾಣ ಮಾಡಿ ಮತ್ತು ವಿದ್ಯುತ್ ದೀಪದ ವ್ಯವಸ್ಥೆಯನ್ನು ಮಾಡಿ ಶಾಶ್ವತವಾದಂಥ ಒಂದು ವ್ಯವಸ್ಥೆಯನ್ನು ಮಾಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ 2 ರೂಪಾಯಿ ಸಹಾಯಧನ ಕೊಟ್ಟಿದ್ದೇವೆ. ಹಾಗೆಯೇ ಸಾರಾಯಿ ಮತ್ತು ಲಾಟರಿಯನ್ನು ನಿಷೇಧ ಮಾಡಿದೆವು. ಅಲೆಮಾರಿ ಅರೆ ಅಲೆಮಾರಿ ಜನಾಂಗದ ವಿದ್ಯಾರ್ಥಿಗಳಿಗೋಸ್ಕರ ವಿದ್ಯಾರ್ಥಿನಿಲಯ ಸ್ಥಾಪನೆಗೆ 38 ಕೋಟಿ ರೂಪಾಯಿ ಕೊಟ್ಟಿದ್ದೇವೆ. ದೇವದಾಸಿಯನ್ನು ಮೊಟ್ಟಮೊದಲ ಬಾರಿಗೆ ಗುರುತು ಮಾಡಿ ಅವರಿಗೆ ತಿಂಗಳಿಗೆ 400 ರೂಪಾಯಿ ಕೊಡುವುದಕ್ಕೆ ಶುರು ಮಾಡಿದೆವು. ಎಸ್‌ಸಿ:ಎಸ್‌ಟಿ ಕಾಲೋನಿಯ ಅಭಿವೃದ್ಧಿಗೆ 333 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ನನ್ನ ಕಾಲದಲ್ಲಿ 114 ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗಳು ಪ್ರಾರಂಭವಾದವು. ಜಿಲ್ಲಾಕೇಂದ್ರದಲ್ಲಿ 326 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಪ್ರಾರಂಭ ಮಾಡಿದೆವು. ಬಂಜಾರ ಸಮುದಾಯದ ತಾಂಡಗಳ ಅಭಿವೃದ್ಧಿಗೆ ಹಣವನ್ನು ಕೊಟ್ಟೆವು. ರಾಷ್ಟ್ರದಲ್ಲಿ ಪ್ರಥಮ ಬಾರಿಗೆ 17,857 ಕೋಟಿ ರೂಪಾಯಿ ಕೃಷಿ ಬಜೆಟ್ ಅನ್ನು ಮಂಡನೆ ಮಾಡಿದೆವು. ದೇಶದಲ್ಲಿ ಮೊದಲ ಬಾರಿಗೆ ಸುವರ್ಣಭೂಮಿ ಯೋಜನೆಯಲ್ಲಿ 10 ಸಾವಿರ ರೂಪಾಯಿಯಂತೆ 6.81 ಲಕ್ಷ ಕುಟುಂಬಕ್ಕೆ 426 ಕೋಟಿ ರೂಪಾಯಿಯನ್ನು ಖರ್ಚು ಮಾಡಿದ್ದೇವೆ. ಭೂ ಚೇತನ ಯೋಜನೆಯಿಂದ ಬೆಳೆ ಉತ್ಪನ್ನ 23% ರಿಂದ 60% ಏರಿಕೆ ಆಯಿತು.

ಇದರಿಂದ ಸುಮಾರು 20 ಲಕ್ಷ ಕುಟುಂಬಗಳಿಗೆ ಅನುಕೂಲವಾಯಿತು. 20 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ವಿಸ್ತರಣೆಯನ್ನು ನಾವು ಮಾಡಿದ್ದೇವೆ. ಹನಿ ನೀರಾವರಿಗೆ ನಾವು ಪ್ರೋತ್ಸಾಹಧನವನ್ನು ಕೊಟ್ಟಿದ್ದೇವೆ. ಒಣ ಭೂಮಿಯ ಅನುಕೂಲಕ್ಕಾಗಿ ದೊಡ್ಡ ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿದ್ದೇವೆ. ಹೀಗೆ ನನ್ನ ಅವಧಿಯಲ್ಲಿ ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಮತ್ತು ಸಾಮಾಜಿಕ ನ್ಯಾಯ ಈ ದಿಕ್ಕಿನಲ್ಲಿ ಕೆಲಸವನ್ನು ಮಾಡಿ ಅಭಿವೃದ್ಧಿಯನ್ನು ಮಾಡಿದ್ದೇವೆ. ಈ ಸಂದರ್ಭದಲ್ಲಿ ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ನೀವು ಇನ್ನೊಂದು ವರ್ಷ ಕೆಲಸ ಮಾಡಿ ನಿಮ್ಮ ಸಾಧನೆಯ ಪ್ರಗತಿ ಏನೆಂದು ತೋರಿಸಿ ಆಮೇಲೆ ಹೋಲಿಕೆಯನ್ನು ಮಾಡಿ, ಆಗ ಹಿಂದಿನ ಸರ್ಕಾರದ ನ್ಯೂನತೆಗಳ ಬಗ್ಗೆ ಮಾತನಾಡುವುದಕ್ಕೆ ನಿಮಗೆ ಸಂಪೂರ್ಣವಾದ ಸ್ವಾತಂತ್ರ್ಯ ಇದೆ. ನೀವು ಬಜೆಟ್ ಮಾಡುವವರೆಗೆ ನಾವು ಶಾಂತ ರೀತಿಯಲ್ಲಿ ಕಾಯುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸನ್ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿರುವಂಥ ಈ ಅವಧಿಯಲ್ಲಿ ಏನೇನು ಕನಸುಗಳನ್ನು ತಾವು ಕಂಡಿದ್ದೀರಿ ಅಂದರೆ, ಹೀಗೆ ಆಗಬೇಕು ಹಾಗೆ ಆಗಬೇಕೆಂದು ತಾವು ಕಲ್ಪನೆ ಇಟ್ಟುಕೊಂಡಿದ್ದೀರಿ. ಆದರೆ, ಸನ್ಮಾನ್ಯ ಸಿದ್ದರಾಮಯ್ಯನವರೆ, ನಾನು ತಮಗೆ ಒಂದು ಕಿವಿ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ಒಂದು ವರ್ಷದ ಮೇಲೆ ನಿಮ್ಮನ್ನು ಅಲ್ಲಿ ಕುಳಿತುಕೊಳ್ಳುವುದಕ್ಕೆ ಬಿಡುವುದಿಲ್ಲ. ಇದನ್ನು ತಾವು ತಿಳಿದುಕೊಳ್ಳಿ. ಆ ಪಕ್ಷ ಮತ್ತು ಅಲ್ಲಿನ ಪರಿಸ್ಥಿತಿ ನೋಡಿ ಹೇಳುತ್ತಿದ್ದೇನೆ. ನಿಮಗೆ ಬೆನ್ನು ತಟ್ಟಿ ಏನಾದರೂ ಮಾಡಿ ಲೋಕಸಭೆ ಚುನಾವಣೆಯೊಳಗೆ ತಮ್ಮನ್ನು ಇಳಿಸಬೇಕೆಂದು ಕಾಯುತ್ತಿದ್ದಾರೆ. ಆದರೆ, ಅದು ಸುಳ್ಳಾಗಿ ನೀವು 5 ವರ್ಷ ಇರಬೇಕೆಂಬುದು ನನ್ನ ಅಪೇಕ್ಷೆಯಾಗಿದೆ. ಆದರೆ, ಈಗ ಇರುವ ಸುತ್ತಮುತ್ತಲಿನ ವಾತಾವರಣವನ್ನು ನೋಡಿದಾಗ ಮತ್ತು ನಮ್ಮ ಕಿವಿಗೆ ಬಿದ್ದಿರುವ ಸುದ್ದಿಗಳನ್ನು ನೋಡಿದಾಗ ನೀವು ಅವಸರ ಮಾಡುತ್ತಿರುವುದು ಸರಿಯಿದೆ. ಮಾನ್ಯ ಸಿದ್ದರಾಮಯ್ಯನವರು ಏಕೆ ಇಷ್ಟೊಂದು urgent ಮಾಡುತ್ತಿದ್ದಾರೆಂದರೆ, ನನ್ನನ್ನು ಉಪಯೋಗ ಮಾಡಿಕೊಂಡು ಯಾವ ಸಮಯದಲ್ಲಿ ಅಂದರೆ, ಕರಿಬೇವು ಸೊಪ್ಪನ್ನು ಒಗ್ಗರಣೆಗೆ ಉಪಯೋಗಿಸಿಕೊಂಡು ಆ ನಂತರ

ಬಿಸಾಕುವಂಥ ರೀತಿಯಲ್ಲಿ ನನ್ನನ್ನು ಎಲ್ಲಿ ಬಿಸಾಕುತ್ತಾರೆ ಎಂಬ ಭಯದಿಂದ ಇಷ್ಟು ತರಾತುರಿಯಿಂದ ಕಾರ್ಯಕ್ರಮಗಳನ್ನು ಮಾಡುತ್ತಿದ್ದೀರಿ.

ಶ್ರೀ ಆರ್.ವಿ.ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಇಲಾಖೆ ಸಚಿವರು) :– ಮಾನ್ಯ ಯಡಿಯೂರಪ್ಪನವರೆ, ಈ ರೀತಿಯಾದ ವಿಚಾರ ನಿಮ್ಮ ಮನಸ್ಸಿನಲ್ಲಿ ಏಕೆ ಬಂತೋ ಗೊತ್ತಿಲ್ಲ. ಏಕೆಂದರೆ, ಅವರೇನೂ ತರಾತುರಿಯಲ್ಲಿ ಮಾಡುತ್ತಿಲ್ಲ. ನಮ್ಮ ಪಕ್ಷದ ಪ್ರಣಾಳಿಕೆಯನ್ನು ಜನರ ಮುಂದಿಟ್ಟಿದ್ದೆವು. ಅದು ನಮಗೆ ಭಗವದ್ಗೀತೆ, ಬೈಬಲ್ ಮತ್ತು ಖುರಾನ್ ಸಹ ಆಗುತ್ತದೆ. ಪ್ರಣಾಳಿಕೆಯಲ್ಲಿರುವುದನ್ನು ಜಾರಿಗೆ ತರತಕ್ಕಂಥದು ನಮ್ಮ ಕರ್ತವ್ಯವಾಗುತ್ತದೆ. ಆದ್ದರಿಂದ, ತಾವೇನೂ ಕಾಳಜಿ ಮಾಡುವುದಕ್ಕೆ ಹೋಗಬೇಡಿ. ಅವರು 5 ವರ್ಷ ಇರುತ್ತಾರೆ. ಪುನಃ 5 ವರ್ಷಗಳವರೆಗೆ ಇರುತ್ತೇವೆ. ಆದ್ದರಿಂದ, ತಮಗೆ ಯಾವುದೇ ರೀತಿಯ ಭಯ ಇರಬಾರದೆಂದು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ.

ಶ್ರೀ ಬಿ.ಎಸ್.ಯಡಿಯೂರಪ್ಪ :– ತಮ್ಮ ಮನದಾಳದಿಂದ ಈ ಭಾವನೆ ಬಂದಿದ್ದರೆ, ಉಳಿದವರೆಲ್ಲರ ಮನಸ್ಸಿನ ಮನದಾಳದಲ್ಲಿ ಅದೇ ಭಾವನೆ ಇದ್ದರೆ ಒಳ್ಳೆಯದು. ಏಕೆಂದರೆ, ಈಗಿನ ಸಚಿವ ಸಂಪುಟದ ಜವಾಬ್ದಾರಿಗಳನ್ನು ನೋಡಿದಾಗ ಹಾಗೆಯೇ, ಕೆಲವರು ಪ್ರಮಾಣವಚನ ಸ್ವೀಕಾರ ಮಾಡದೇ ಇರುವುದನ್ನು ನೋಡಿದಾಗ ಹಾಗೂ ಇಷ್ಟು ತರಾತುರಿಯಲ್ಲಿ ಅವರು ಕಾರ್ಯಕ್ರಮವನ್ನು ಘೋಷಣೆ ಮಾಡುತ್ತಿರುವುದನ್ನು ನೋಡಿದಾಗ ನಿಮ್ಮೆಲ್ಲರಿಗಿಂತ ಹೆಚ್ಚಾಗಿ ವಾಸ್ತವ ಸ್ಥಿತಿ ರಾಜ್ಯದ ಮುಖ್ಯಮಂತ್ರಿಯವರಿಗೆ ಗೊತ್ತಿರುವಷ್ಟು ಮಾನ್ಯ ದೇಶಪಾಂಡೆಯವರಿಗೆ ಮತ್ತು ಮಾನ್ಯ ಜಯಚಂದ್ರರವರಿಗೆ ಗೊತ್ತಿರುವುದಕ್ಕೆ ಸಾಧ್ಯವಿಲ್ಲ. ಇಲ್ಲದಿದ್ದರೆ ಮಾನ್ಯ ಜಯಚಂದ್ರರವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆಯ ಸಚಿವರಾಗಿ ಇಲ್ಲಿ ಕುಳಿತುಕೊಳ್ಳುವುದಕ್ಕೆ ಸಾಧ್ಯವಾಗುತ್ತಿತ್ತಾ? ಅಂಥ ಒಬ್ಬ ಬುದ್ಧಿವಂತ ಮೇಧಾವಿ ವ್ಯಕ್ತಿಗೆ ಎಂಥ ಇಲಾಖೆ ಕೊಡಬೇಕಾಗಿತ್ತು ಸ್ವಾಮಿ? ಮಾನ್ಯ ರಮೇಶ್ ಕುಮಾರ್ ಅಂಥ ಒಬ್ಬ ಅನುಭವಿ ವ್ಯಕ್ತಿ ಇವತ್ತಿನದಿವಸ ಅಲ್ಲಿ ಕುಳಿತುಕೊಂಡಿದ್ದಾರೆ. ಮಾನ್ಯ ರಮೇಶ್ ಕುಮಾರ್‌ರವರು ದಯಮಾಡಿ ಅನ್ಯಥಾ ಭಾವಿಸಬಾರದೆಂದು ಕೇಳಿಕೊಳ್ಳುತ್ತೇನೆ. ಇವತ್ತಿನದಿವಸ ಎಂಥೆಂಥ stalwarts ಗೆದ್ದು ಬಂದಿದ್ದಾರೆ. ಅವರಿಗೆಲ್ಲ ಎಲ್ಲಿ ಅವಕಾಶ ಆಯಿತು? ಆ ಕಡೆಗೆ ತಾವು

ಗಮನವನ್ನು ಕೊಟ್ಟಿದ್ದೀರಾ? ಗಮನ ಕೊಡುವುದಕ್ಕೆ ಆಗಲಿಲ್ಲ. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಮಾಡುವುದು ಬಿಡುವುದು ನಿಮಗೆ ಬಿಟ್ಟಿದ್ದು. ಆದರೆ, ವಾಸ್ತವಿಕ ಸ್ಥಿತಿ ಆ ರೀತಿ ಇಲ್ಲ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ.

ಶ್ರೀ ಹೆಚ್.ಕೆ.ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :– ಮಾನ್ಯ ಅಧ್ಯಕ್ಷರೆ, ಇಲ್ಲದೇ ಇರುವುದನ್ನು ಸೃಷ್ಟಿ ಮಾಡಿ ಭಯ ಹುಟ್ಟಿಸುವುದಕ್ಕೆ ಪ್ರಯತ್ನವನ್ನು ಮಾನ್ಯ ಯಡಿಯೂರಪ್ಪನವರು ಮಾಡುತ್ತಿದ್ದಾರೆ. ತಾವು ಮುಖ್ಯಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ಬಹಳ ಗಟ್ಟಿಯಾಗಿ ಮುಖ್ಯಮಂತ್ರಿಗಳಾಗಿದ್ದೀರಿ. ಆದರೆ, ನಿಮ್ಮ ಸುತ್ತಮುತ್ತ ಇದ್ದವರು ಭಯ ಹುಟ್ಟಿಸಿ ಆಪರೇಷನ್ ಕಮಲ ಮಾಡಿಸಿದಂಥ ಸ್ಥಿತಿ ನಮ್ಮ ರಾಜ್ಯಕ್ಕೆ ಬಾರದ ಹಾಗೆ ಭಯ ಹುಟ್ಟಿಸಿದರೂ ಸಹ ಮಾನ್ಯ ಸಿದ್ದರಾಮಯ್ಯನವರು ಭಯವೇನೂ ಪಡುವಂಥವರಲ್ಲ. ಕಾಂಗ್ರೆಸ್‌ನಲ್ಲಿ ಏನು ಗಟ್ಟಿತನ ಇದೆಯೋ ಆ ಗಟ್ಟಿತನವನ್ನು ತೋರಿಸುತ್ತೇವೆ. ಆದರೆ, ಅಂಥ ಯಾವುದೇ ರಾಜಕೀಯ ಸನ್ನಿವೇಶ ಕರ್ನಾಟಕದಲ್ಲಿ ಆಗುವುದಿಲ್ಲ. ಆದ್ದರಿಂದ, ಇದನ್ನು ಬಿಟ್ಟು ಉಳಿದಂಥ ಎಲ್ಲ ರಾಜಕಾರಣವನ್ನು ಮತ್ತು ಭಯ ಹುಟ್ಟಿಸುವಂಥದನ್ನು ಮಾಡಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ :– ಇದಕ್ಕೆ ನಮ್ಮ ಪೂರ್ಣ ಸಹಕಾರ ಕೊಡುತ್ತೇವೆ. ಇದರಲ್ಲಿ ನಮ್ಮದೇನೂ ಅಭ್ಯಂತರ ಇಲ್ಲ. ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇವತ್ತು ಗೃಹ ಇಲಾಖೆಯ ಜವಾಬ್ದಾರಿಯನ್ನು ಬಹಳ ಒಬ್ಬ ಒಳ್ಳೆಯ ವ್ಯಕ್ತಿಗೆ ಕೊಟ್ಟಿದ್ದೀರಿ. ಅಂದರೆ, ಅಲ್ಪಸಂಖ್ಯಾತ ಬಂಧು ಒಬ್ಬರಿಗೆ ಕೊಟ್ಟಿದ್ದೀರಿ. ಇದು ನಿಜವಾಗಿಯೂ ಕೂಡ ಸ್ವಾಗತಾರ್ಹವಾದ ಸಂಗತಿ.ಆದರೆ, ತಾವು ಕೆಪಿಸಿಸಿ ಸಭೆಯಲ್ಲಿ ಮಾತನಾಡುತ್ತಾ ಬಿಜೆಪಿ ಸರ್ಕಾರ ಕೋಮುವಾದದ ರಾಜಕಾರಣದ ಹಾದಿ ಹಿಡಿದ ಕಾರಣದಿಂದ ಅಲ್ಪಸಂಖ್ಯಾತರು ನಿರಂತರವಾಗಿ ಆತಂಕದಲ್ಲಿ ಬದುಕುತ್ತಿದ್ದರು. ಆದರೆ, ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅಂಥ ಪರಿಸ್ಥಿತಿ ಇರದು. ಅಲ್ಪಸಂಖ್ಯಾತರಿಗೆ ಧೈರ್ಯ ತುಂಬುವುದಕ್ಕಾಗಿ ಅದೇ ಸಮುದಾಯದವರನ್ನು ಗೃಹ ಸಚಿವರನ್ನಾಗಿ ಮಾಡಿದ್ದೇನೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಅತ್ಯಂತ ವಿನಯದಿಂದ ಒಂದು ಮಾತನ್ನು ತಮಗೆ ಹೇಳುವುದಕ್ಕೆ ಬಯಸುತ್ತೇನೆ. ಅದೇನೆಂದರೆ, ತಾವು ದುಡಿಕಿನಿಂದ ಹೇಳಿರುವಂಥ ಮಾತೆಂದು ಹೇಳುವುದಕ್ಕೆ ಬಯಸುತ್ತೇನೆ.

ಒಂದೊಂದು ಸಮಾಜಕ್ಕೆ ಒಬ್ಬೊಬ್ಬ ಗೃಹ ಸಚಿವರನ್ನಾಗಿ ಮಾಡುವುದಕ್ಕೆ ಆಗುವುದಿಲ್ಲ. ಹಿಂದುಳಿದ ವರ್ಗಕ್ಕೆ ಒಬ್ಬ ಗೃಹಸಚಿವನ್ನಾಗಿ ಮಾಡುವುದಕ್ಕೆ ಆಗುವುದಿಲ್ಲ. ಅಲ್ಪಸಂಖ್ಯಾತ ವರ್ಗದವರು ಅಥವಾ ಯಾವುದೇ ವ್ಯಕ್ತಿಯಾಗಲಿ ಅವರು ಗೃಹ ಸಚಿವರಾದ ಮೇಲೆ ಇಡೀ ಕನ್ನಡ ನಾಡಿನ 6 ಕೋಟಿ ಜನರ ರಕ್ಷಣೆಯನ್ನು ಮಾಡುತ್ತಾರೆ ಎಂಬ ವಿಶ್ವಾಸ ನನಗೆ ಇದೆ. ಆದರೆ, ನೀವು ಅಲ್ಪಸಂಖ್ಯಾತರನ್ನು ತೃಪ್ತಿಪಡಿಸುವುದಕ್ಕೋಸ್ಕರ ಅಲ್ಪಸಂಖ್ಯಾತರೊಬ್ಬರನ್ನು ಗೃಹ ಸಚಿವರನ್ನಾಗಿ ಮಾಡಿದ್ದೇನೆಂಬುದು ನಿಮ್ಮ ಬಾಯಿಯಲ್ಲಿ ಬಂದಿದ್ದರಿಂದ ಬಹುಸಂಖ್ಯಾತ ಹಿಂದುಗಳು ಏನು ತಿಳಿದುಕೊಳ್ಳಬಹುದೆಂದು ತಾವು ಯೋಚನೆ ಮಾಡಿ. ಇದು ನಿಮ್ಮ ಬಾಯಿಯಿಂದ ಬರತಕ್ಕಂಥ ಮಾತು ಅಲ್ಲ. ಅಲ್ಪಸಂಖ್ಯಾತರ ಬಗ್ಗೆ ಒಳ್ಳೆಯ ಕೆಲಸವನ್ನು ನಾವು ನೀವು ಎಲ್ಲಾ ಸೇರಿ ಮಾಡೋಣ. ಬೇಕಾದಷ್ಟು ಕಾರ್ಯಕ್ರಮಗಳು ಮಾಡುವುದಿದೆ. ಸ್ವಾತಂತ್ರ ಬಂದಾಗಿನಿಂದ ಅವರನ್ನು vote bank ಆಗಿ ಉಪಯೋಗ ಮಾಡಿಕೊಂಡು ಅವರನ್ನು ಬಿಸಾಕಿದ್ದೀರಿ. ಈಗಲಾದರೂ ನಿಮಗೆ ಜ್ಞಾನೋದಯವಾಗಿ ಒಳ್ಳೆಯ ಕೆಲಸ ಮಾಡುವುದಕ್ಕೆ ಮುಂದೆ ಬಂದಿದ್ದೀರಿ. ಅವರನ್ನು ಗೃಹ ಸಚಿವರನ್ನಾಗಿ ಮಾಡಿರುವುದಕ್ಕೆ ನಾನು ಸ್ವಾಗತ ಮಾಡುತ್ತೇನೆ. ಆದರೆ, ನಿಮ್ಮ ಬಾಯಿಯಲ್ಲಿ ಅಲ್ಪಸಂಖ್ಯಾತರ ರಕ್ಷಣೆಗಾಗಿ ಅವರನ್ನು ನಾವು ಗೃಹ ಸಚಿವರನ್ನಾಗಿ ಮಾಡಿದ್ದೇವೆ ಎನ್ನತಕ್ಕಂಥದು ಬಹುಸಂಖ್ಯಾತರ ಮನಸ್ಸಿಗೆ ತುಂಬಾ ಆಘಾತವಾಗಿರುವಂಥದ್ದು. ಆದ್ದರಿಂದ, ದಯಮಾಡಿ ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಿ. ಇನ್ನು ಮುಂದೆ ಬಾಯಿ ತಪ್ಪಿ ಸಹ ಈ ರೀತಿಯಾದ ಮಾತುಗಳು ಒಬ್ಬ ಮುಖ್ಯಮಂತ್ರಿಯ ಬಾಯಿಂದ ಬರಬಾರದೆಂದು ಅವರಲ್ಲಿ ವಿನಂತಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಶ್ರೀರಾಮುಲು (ಬಳ್ಳಾರಿ) :– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ನನಗೆ ಅವಕಾಶ ಕೊಟ್ಟಿರುವುದರಿಂದ ನಾನು ತಮಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಪ್ರಥಮ ಬಾರಿಗೆ 14ನೇ ವಿಧಾನ ಸಭೆಗೆ ಆಯ್ಕೆಯಾಗಿರುವಂಥ ಎಲ್ಲ ಗೌರವಾನ್ವಿತ ಶಾಸಕರಿಗೆ ಮೊಟ್ಟಮೊದಲಿಗೆ ಹಾರ್ದಿಕವಾದ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಈ ನಾಡಿನಲ್ಲಿ ರಾಜ್ಯಪಾಲರು ಭಾಷಣ ಮಾಡುವಂಥ ಸಂದರ್ಭದಲ್ಲಿ ಬದಲಾವಣೆಗೋಸ್ಕರ ಈ ನಾಡಿನ ಜನರು ಕಾಂಗ್ರೆಸ್ ಪಕ್ಷವನ್ನು ಅಧಿಕಾರಕ್ಕೆ

ತಂದಿದ್ದಾರೆಂಬ ಮಾತನ್ನು ಅವರು ತಿಳಿಸಿದರು. ಯಾವರೀತಿಯಾದ ಬದಲಾವಣೆ ಎಂಬ ವಿಷಯದ ಬಗ್ಗೆ ಹೇಳುವುದಾದರೆ, ಈ ರಾಜ್ಯದ ಮುಖ್ಯಮಂತ್ರಿಯಾಗಿ ಸನ್ಮಾನ್ಯ ಸಿದ್ದರಾಮಯ್ಯನವರು ಅಧಿಕಾರ ವಹಿಸಿಕೊಂಡ ನಂತರ ಕೆಲವೇ ಗಂಟೆಗಳಲ್ಲಿ ವಿಚಿತ್ರವಾದಂಥ ಬದಲಾವಣೆಯನ್ನು ತರುವುದಕ್ಕೆ ಹೊರಟ್ಟಿದ್ದಾರೆ. ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದಕ್ಕಾಗಿ ಪ್ರತಿ ಕುಟುಂಬಕ್ಕೆ 30 ಕೆ.ಜಿ. ಅಕ್ಕಿ ಕೊಡುತ್ತೇವೆಂದು ಅವರ ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಣೆಯನ್ನು ಮಾಡಿದ್ದರು. ಅದೇ ರೀತಿಯಲ್ಲಿ ಬಿಜೆಪಿ ಪಕ್ಷದವರು ತಮ್ಮ ಪ್ರಣಾಳಿಕೆಯಲ್ಲಿ 25 ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಘೋಷಣೆಯನ್ನು ಮಾಡಿದರು. ಕಾಂಗ್ರೆಸ್‌ನವರು 30 ಕೆ.ಜಿ.ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದರು. ಇದರ ವ್ಯತ್ಯಾಸ 5 ಕೆ.ಜಿ.ಅಕ್ಕಿ ಮಾತ್ರ. ಅವರು ತಮ್ಮ ತಮ್ಮ ಪ್ರಣಾಳಿಕೆಯಲ್ಲಿ ಘೋಷಣೆಯನ್ನು ಮಾಡಿದರು. ಅಕ್ಕಿ ವಿಷಯದಲ್ಲಿ ರಾಜಕೀಯ ಆಗುತ್ತದೆ. ಈ ನಾಡಿನ ಬಡವರಗೋಸ್ಕರವಾಗಿ ಅಕ್ಕಿಗೋಸ್ಕರವಾಗಿ ರಾಜಕೀಯ ಆಗುತ್ತಿದೆ. ನಮ್ಮ ಪಕ್ಕದ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಈ ರೀತಿಯ ಬಹಳಷ್ಟು ಹಳೆಯ ಘೋಷಣೆಗಳು ಆಗಿವೆ. ಕರ್ನಾಟಕದಲ್ಲಿ ಹೊಸ ಘೋಷಣೆಯಾಗಿದ್ದು ಇದನ್ನು ನಾವೆಲ್ಲರೂ ಈಗ ಕೇಳುತ್ತಿದ್ದೇವೆ. 1980 ರಲ್ಲಿ ತಮಿಳುನಾಡಿನಲ್ಲಿ ಅಂದಿನ ಮುಖ್ಯ ಮಂತ್ರಿಗಳಾಗಿದ್ದಂಥ ಎಂ.ಜಿ.ರಾಮ–ಚಂದ್ರನ್‌ರವರು ಒಂದು ರೂ.ಗೆ ಒಂದು ಕೆ.ಜಿ. ಅಕ್ಕಿ ಎಂದು ಘೋಷಣೆಯನ್ನು ಮಾಡಿದ್ದರು. ನಂತರ ಮುಂದಿನ ದಿನಮಾನಗಳಲ್ಲಿ 1982 ರಲ್ಲಿ ಆಂಧ್ರ ಪ್ರದೇಶದ ಅಂದಿನ ಮುಖ್ಯಮಂತ್ರಿಗಳಾಗಿದ್ದ ಎನ್.ಟಿ.ರಾಮರಾವ್‌ರವರು ಒಂದು ರೂ.ಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡುವುದಾಗಿ ಘೋಷಣೆಯನ್ನು ಮಾಡಿದರು. ನನ್ನ ಕಳಕಳಿ ಇಷ್ಟೇ 1980 ರಿಂದ 2013 ರವರೆಗೆ ನಾವು ನೋಡುತ್ತಿದ್ದೇವೆ, 33 ವರ್ಷಗಳನ್ನು ಕಳೆದಿದ್ದೇವೆ. ಆದರೆ ದೇಶದಲ್ಲಿರುವ ಬಡವರ ಸ್ಥಿತಿಗತಿಗಳು ಏನೂ ಬದಲಾವಣೆ ಆಗಿಲ್ಲ. ಇದು ನಮ್ಮೆಲ್ಲರ ದೂರದೃಷ್ಟಿಯ ಕೊರತೆಯ ಸಂಗತಿ ಎಂದು ಅಂದುಕೊಳ್ಳಬಹುದು. ನಾನು ಎಲ್ಲವನ್ನೂ ಬಹಳಷ್ಟು ಹೇಳುವುದಕ್ಕೆ ಬಯಸುತ್ತೇನೆ. ಹಿಂದಿನ ಮುಖ್ಯಮಂತ್ರಿಗಳಾದಂಥ ಯಡಿಯೂರಪ್ಪನವರು ಆಗಿರಬಹುದು, ನಂತರ ಸದಾನಂದಗೌಡರು ಆಗಿರಬಹುದು, ಜಗದೀಶ್ ಶೆಟ್ಟರ್‌ವರು ಆಗಿರಬಹುದು, ಕುಮಾರಸ್ವಾಮಿಯವರು ಆಗಿರಬಹುದು ಅವರೆಲ್ಲರೂ ಕೂಡ ಪ್ರಯತ್ನವನ್ನು ಮಾಡಿದರು. ಆದರೆ ಅವರು ಒಂದು ರೂ.ಗೆ

ಒಂದು ಕೆ.ಜಿ.ಅಕ್ಕಿಯನ್ನು ಕೊಡುವುದರಲ್ಲಿ ಯಶಸ್ವಿ ಆಗಲಿಲ್ಲ, ಅಕ್ಕಿ ಕೊಡುವುದಕ್ಕೆ ಸಾಧ್ಯವಾಗಲಿಲ್ಲ. ಅದೇ ರೀತಿಯಲ್ಲಿ ಕೇಂದ್ರದಲ್ಲಿದ್ದಂಥ UPA ಸರ್ಕಾರ ಕಳೆದ 9 ವರ್ಷಗಳಿಂದ ಏನು ಅಧಿಕಾರವನ್ನು ನಡೆಸುತ್ತಿದೆ ಅವರಿಗೂ ಕೂಡ ಒಂದು ರೂ.ಗೆ ಅಕ್ಕಿಯನ್ನು ಕೊಡುವುದಕ್ಕೆ ಸಾಧ್ಯವಾಗಲಿಲ್ಲ ಎನ್ನುವುದನ್ನು ತಮ್ಮ ಗಮನಕ್ಕೆ ನಾನು ತರುತ್ತಿದ್ದೇನೆ. ಮಾನ್ಯ ಸಿದ್ದರಾಮಯ್ಯನವರು ಒಂದು ರೂ.ಗೆ ಒಂದು ಕೆ.ಜಿ.ಅಕಿಯನ್ನು ಕೊಡುತ್ತೇವೆಂದು ಏನು ಘೋಷಣೆಯನ್ನು ಮಾಡಿದ್ದಾರೆ ನಾವು ಯಾರೂ ಅದರ ವಿರುದ್ಧವಲ್ಲ. ಮಾನ್ಯ ಸಿದ್ದರಾಮಯ್ಯ–ನವರು ಹೇಳಿದಂತೆ ಒಂದು ರೂ.ಗೆ ಒಂದು ಕೆ.ಜಿ.ಅಕ್ಕಿಗೋಸ್ಕರವಾಗಿ ನಾವು ಎಲ್ಲಾ ರೀತಿಯಲ್ಲಿ ಸ್ವಾಗತವನ್ನು ಕೋರುತ್ತೇವೆ. ಮುಖ್ಯಮಂತ್ರಿಯಾಗಿ ಅಧಿಕಾರವನ್ನು ವಹಿಸಿಕೊಂಡ ಕೆಲವೇ ಗಂಟೆಗಳಲ್ಲಿ ನಾವು ಮಾಧ್ಯಮವನ್ನು ಗಮನಿಸುತ್ತಿದ್ದೆವು. ಆ ಸಂದರ್ಭದಲ್ಲಿ ಅವರ ಮೊದಲನೇ ಘೋಷಣೆ ಏನೆಂದರೆ, ಜೂನ್ ಒಂದನೇ ತಾರೀಖಿನಿಂದಲೇ ಒಂದು ರೂ.ಗೆ ಅಕ್ಕಿ ಕೊಡುವುದು ಪ್ರಾರಂಭವಾಗುತ್ತದೆ ಎನ್ನುವಂಥದ್ದನ್ನು ಅವರು ತಿಳಿಸಿದರು. ಇವತ್ತು ಒಂದು ರೂ.ಗೆ ಒಂದು ಕೆ.ಜಿ. ಅಕ್ಕಿಯನ್ನು ಕೊಡಬೇಕೆಂದು ಹೇಳಿ ಏನು ಘೋಷಣೆಯನ್ನು ಮಾಡಿದರೋ ಅದು ಬಹಳಷ್ಟು ಜನಪ್ರಿಯ ಯೋಜನೆ ಆಗಿದೆ. ಅವರು ಬಹಳಷ್ಟು ಬಡವರ ಪರವಾಗಿ ಕಳಕಳಿ ಇದ್ದಂಥ ವ್ಯಕ್ತಿ ಮುಖ್ಯಮಂತ್ರಿಗಳು ಏನು ಘೋಷಣೆಯನ್ನು ಮಾಡಿದ್ದಾರೋ, ಅದರ ಬಗ್ಗೆ ನನ್ನ ಅಭಿಪ್ರಾಯ ಇಷ್ಟೇ ಅವರು ಜೂನ್ ಒಂದರಿಂದ ಪ್ರಾರಂಭ ಮಾಡಿದ್ದರೆ ಜನರಲ್ಲಿ ವಿಶ್ವಾಸ ಮತ್ತು ನಂಬಿಕೆ ಇರುತ್ತಿತ್ತು ನಂತರ ಅದನ್ನು ಏನು ಮುಂದಕ್ಕೆ ಹಾಕಿದರು, ಜನರಲ್ಲಿ ಒಂದು ರೂ.ಗೆ ಅಕ್ಕಿ ಸಿಗುತ್ತದೋ ಇಲ್ಲವೋ ಎನ್ನುವ ಬಹಳಷ್ಟು ಅನುಮಾನಗಳಿಗೆ ಎಡೆ ಮಾಡಿತು. ನಂತರ ಪತ್ರಿಕೆಗಳಲ್ಲಿ ನಾವು ನೋಡುತ್ತಿದ್ದೇವೆ. ಅವರು ಅಧಿಕಾರವನ್ನು ವಹಿಸಿಕೊಂಡು ನಂತರ ಎಲ್ಲೋ ಒಂದು ಕಡೆ ತರಾತುರಿಯಲ್ಲಿ ಈ ಯೋಜನೆಯ ಘೋಷಣೆಯನ್ನು ಮಾಡಿದರಾ? ಈ ಯೋಜನೆಯನ್ನು ಘೋಷಣೆ ಮಾಡುವುದಕ್ಕೆ ಮುಂಚೆ ಅವರು ಸಚಿವ ಸಂಪುಟದ ಜೊತೆಯಲ್ಲಿ ಚರ್ಚೆ ಮಾಡಿ ಈ ರೀತಿಯ ಘೋಷಣೆಯನ್ನು ಮಾಡಿದ್ದರೆ ಸರಿಯಾಗಿ ಇರುತ್ತಿತ್ತು. ಇದು ಕೃಷಿ ಕ್ಷೇತ್ರದಲ್ಲಿ ಆಗಿರಬಹುದು ಅಥವಾ ಆರ್ಥಿಕ ಕ್ಷೇತ್ರದಲ್ಲಿ ಆಗಿರಬಹುದು, ಮಾನವ ಸಂಪನ್ಮೂಲಗಳು ಆಗಿರಬಹುದು. ಎಲ್ಲಾ ತಜ್ಞರ ಜೊತೆಯಲ್ಲಿ ಚರ್ಚೆಯನ್ನು

ಮಾಡಿ ಇದನ್ನು ಘೋಷಣೆ ಮಾಡಿದ್ದರೆ ಚೆನ್ನಾಗಿ ಇರಬಹುದಾಗಿತ್ತು ಎನ್ನುವುದು ನಮ್ಮ ಅಭಿಪ್ರಾಯವಾಗಿದೆ. ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಒಂದು ಆರ್ಟಿಕಲ್ ಬಂತು. "ಅಕ್ಕಿಯ ಕಸರತ್ತು ಸಧ್ಯಕ್ಕೆ ಕೇಂದ್ರದ ನೆರವು ಇಲ್ಲ" ಎನ್ನುವಂಥದ್ದು ಬಂದಿರುವುದನ್ನು ನಾವು ನೋಡಿರುತ್ತೇವೆ. ಆದರೆ ಇಲ್ಲಿಯವರೆಗೆ ಕೇಂದ್ರದಿಂದ ಪೂರೈಕೆ ಆಗುತ್ತಿರುವಂಥ ಅಕ್ಕಿ 1,77,024 ಮೆಟ್ರಿಕ್ ಟನ್ ಇತ್ತು. ನಮಗೆ ಒಂದು ರೂ.ಗೆ ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆಂದು ಹೇಳಿದ ತಕ್ಷಣವೇ 1,59,653 ಮೆಟ್ರಿಕ್ ಟನ್ ಬೇಕಾಗಿದೆ. ಒಟ್ಟು BPL ಕಾರ್ಡುದಾರರು ಸುಮಾರು 87 ಲಕ್ಷ ಜನರು ಇದ್ದಾರೆ. ಅದೇ ರೀತಿಯಲ್ಲಿ ಸುಮಾರಾಗಿ ಅಂತ್ಯೋದಯ ಕಾರ್ಡಿನವರು 10 ಲಕ್ಷ ಜನರು ಇದ್ದಾರೆ. ಸುಮಾರು 97 ಲಕ್ಷ ಜನ ಬಡವರು ನಮ್ಮ ರಾಜ್ಯದಲ್ಲಿದ್ದಾರೆ. ಅವರೆಲ್ಲರಿಗೂ ಕೊಡಲು ಸುಮಾರು 1.60 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಬೇಕಾಗಿದೆ. ನಮ್ಮ ಬೊಕ್ಕಸಕ್ಕೆ 5872 ಕೋಟಿ ರೂ.ಗಳು ನಷ್ಟವಾಗುತ್ತದೆ. ಈ ನಷ್ಟವನ್ನು ಯಾವ ರೀತಿಯಲ್ಲಿ ಭರಿಸುತ್ತಾರೆ ಎನ್ನುವುದನ್ನು ಅವರು ಉತ್ತರ ಕೊಡುವ ಸಂದರ್ಭದಲ್ಲಿ ಸ್ಪಷ್ಟೀಕರಣವನ್ನು ಕೊಡಲಿ. ಇವತ್ತು ಬಡವರಿಗೋಸ್ಕರ ಒಳ್ಳೆಯ ಯೋಜನೆ, ನಾವು ಇಲ್ಲವೆಂದು ಹೇಳುವುದಕ್ಕೆ ಹೋಗುವುದಿಲ್ಲ. ಆದಷ್ಟು ಬೇಗನೇ ಶೀಘ್ರಗತಿಯಲ್ಲಿ ಆಗಲಿ. ಸುಮಾರು 5872 ಕೋಟಿ ರೂ.ಗಳ ಏನು ಬೊಕ್ಕಸಕ್ಕೆ ನಷ್ಟವಾಗುತ್ತದೆ ಅದನ್ನು ಯಾವ ರೀತಿ ಸರಿಪಡಿಸಿಕೊಳ್ಳುತ್ತಾರೆ ಎನ್ನುವುದನ್ನು ಅವರು ಸ್ಪಷ್ಟೀಕರಣವನ್ನು ಕೊಡುವಂಥ ಸಂದರ್ಭದಲ್ಲಿ ತಿಳಿಸಬೇಕೆಂದು ಹೇಳಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಬಡವರಿಗೋಸ್ಕರವಾಗಿ ಈ APL ಕಾರ್ಡುದಾರರಿಗೆ ಅಕ್ಕಿಯನ್ನು ಕೊಡುತ್ತಾರೆಂದು ತಿಳಿದುಕೊಂಡಿದ್ದೆವು. BPL ಕಾರ್ಡುದಾರರಿಗೂ ಕೂಡ ಒಂದು ರೂ.ಗೆ ಅಕ್ಕಿಯನ್ನು ಕೊಡುತ್ತೇವೆಂದು ಘೋಷಣೆ ಮಾಡಿರುವುದನ್ನು ಪತ್ರಿಕೆಗಳಲ್ಲಿ ನೋಡಿದೆವು. ಮುಖ್ಯಮಂತ್ರಿಗಳು ಅಧಿಕಾರವನ್ನು ವಹಿಸಿಕೊಂಡ ನಂತರ ಬಡ್ಡಿರಹಿತ ಕೃಷಿ ಸಾಲದ ಮೊತ್ತವನ್ನು ಒಂದು ಲಕ್ಷದಿಂದ ಎರಡು ಲಕ್ಷದವರೆಗೆ ಏರಿಸುವುದಾಗಿ ಹೇಳಿದ್ದಾರೆ. ಅದು ಏನು ಕಾಣುತ್ತದೆಂದರೆ, ಸುಮಾರು 10,000 ಕೋಟಿ ರೂ.ಗಳ ಒಂದು ಹೊರೆ ಬೀಳಲಿದೆ.

(ಈ ಹಂತದಲ್ಲಿ ಡಾ:ಎ.ಬಿ.ಮಾಲಕರೆಡ್ಡಿಯವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಡುವಂಥ ಸಂದರ್ಭದಲ್ಲಿ ಅವರು ಹೇಗೆ ಇದನ್ನು ಸರಿಪಡಿಸಿಕೊಳ್ಳುತ್ತಾರೆನ್ನುವುದನ್ನು ಹೇಳಬೇಕಾಗುತ್ತದೆ. ಒಂದು ರೂ.ಗೆ ಅಕ್ಕಿಯನ್ನು ಕೊಡುವುದರ ಬಗ್ಗೆ ಘೋಷಣೆಯನ್ನು ಮಾಡಿದರು. ಇವತ್ತಿಗೆ 33 ವರ್ಷಗಳಾಗುತ್ತಾ ಬಂದಿದೆ. ಬಡವರನ್ನು ಕೀಳಾಗಿ ಕಾಣುವ ಒಂದು ಪರಿಸ್ಥಿತಿಯನ್ನು ನಾವೆಲ್ಲಾ ಕಾಣುತ್ತಿದ್ದೇವೆ. ಆದ್ದರಿಂದ ನಾನು ಹೇಳುವುದು ಇಷ್ಟೇ, ತಾವು ಒಂದು ರೂ.ಗೆ ಅಕ್ಕಿ ಕೊಡುವುದಕ್ಕೆ ಏನು ಘೋಷಣೆಯನ್ನು ಮಾಡಿದಿರಿ, ಅದಕ್ಕೆ ನಾವು ವಿರುದ್ಧವಲ್ಲ. ಆದರೆ ಬಡವರ ದುಡಿಯುವ ಕೈಗಳಿಗೆ ಕೆಲಸ ಕೊಡುವಂಥದ್ದನ್ನು ತಾವು ಮಾಡಿ. ಅವರೆಲ್ಲರನ್ನು ಸಾಧುವಾಗಿ ಕಾಣಬೇಕು ಎನ್ನುವ ಮಾತನ್ನು ನಾನು ತಮಗೆ ಹೇಳಬೇಕಾಗುತ್ತದೆ. ಬಡವರಿಗೋಸ್ಕರವಾಗಿ ಈ ರೀತಿ ಘೋಷಣೆ ಮಾಡುವಂಥ ಸಂದರ್ಭದಲ್ಲಿ ಅವರೆಲ್ಲರಿಗೂ ಕೂಡ ಬೇಕಾಗಿರುವುದು ದುಡಿಯುವ ಕೈಗೆ ಕೆಲಸ ಸಿಗಬೇಕು. ಗುಣಮಟ್ಟದ ಶಿಕ್ಷಣ ಸಿಗಬೇಕು, ಗುಣಮಟ್ಟದ ಉದ್ಯೋಗ ಸಿಗಬೇಕು, ಗುಣಮಟ್ಟದ ಮೂಲಭೂತ ಸೌಕರ್ಯಗಳು ಸಿಗಬೇಕು ಎನ್ನುವುದು ನನ್ನ ಕಳಕಳಿ ಆಗಿದೆ. ನಿಜವಾಗಿ ಇವತ್ತು ಒಂದು ರೂ.ಗೆ ಅಕ್ಕಿಯನ್ನು ಕೊಡಬೇಕಾದರೆ ಬಡವರಿಗೋಸ್ಕರ BPL ಕಾರ್ಡಿನ ವಿಷಯದಲ್ಲಿ ಏನು ಗೊಂದಲವಾಗುತ್ತಿದೆ 224 ಕ್ಷೇತ್ರಗಳಲ್ಲಿ ಯಾರು ಬಡವರು ಇದ್ದಾರೆ ಅವರಿಗೆ BPLಕಾರ್ಡು ಕೊಡಬೇಕು. ಅವರಿಗೆ ಇವತ್ತಿನವರೆಗೂ BPLಕಾರ್ಡು ಕೊಟ್ಟಿಲ್ಲ. ಒಂದು ರೂ.ಗೆ ಅಕ್ಕಿಯನ್ನು ಕೊಡಬೇಕಾದರೆ ಯಾರು BPL ಕಾರ್ಡುದಾರರು ಇದ್ದಾರೋ, ಯಾರು APL ಕಾರ್ಡುದಾರರು ಇದ್ದಾರೆ ಅವರನ್ನು ಗುರ್ತಿಸಿ ಅವರೆಲ್ಲರಿಗೂ ಕಾರ್ಡು ಕೊಡುವಂಥ ಕೆಲಸ ಮಾಡಲಿ. ನಂತರ ತಾವು ಏನು ಘೋಷಣೆಯನ್ನು ಮಾಡಿದ್ದೀರಿ ಆ ಹಣವನ್ನು ಕೊಡುವಂಥ ಕೆಲಸವನ್ನು ಮಾಡಿ. ತಾವು ಅಧಿಕಾರವನ್ನು ವಹಿಸಿಕೊಂಡ ನಂತರ ಒಂದು ರೂ.ಗೆ ಅಕ್ಕಿಯನ್ನು ಕೊಡುವ ಘೋಷಣೆಯ ಜೊತೆಯಲ್ಲಿ ತಾವು ರೈತರ ಹಾಲಿಗೆ 2 ರೂ.ಗಳ ಬದಲಾಗಿ 4 ರೂ.ಗಳ ಪ್ರೋತ್ಸಾಹ ಧನವನ್ನು ಕೊಡುತ್ತೇವೆಂದು ಹೇಳಿದಿರಿ. ವಸತಿ ಯೋಜನೆಗೆ ಸಹಾಯಧನ ಮಾಡುತ್ತೇವೆಂದು ಹೇಳಿದಿರಿ. ಎಲ್ಲಾ ನಿಗಮ ಮಂಡಳಿಗಳಿಂದ ಪಡೆದಂಥ ಎಲ್ಲಾ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡುತ್ತೇನೆಂದು ತಾವು ಹೇಳಿದಿರಿ. ಆದರೆ ಎಲ್ಲಾ ಕಾರ್ಯಕ್ರಮಗಳಿಗೆ ಸುಮಾರು 10,000 ಕೋಟಿ ರೂ.ಗಳಾಗುತ್ತದೆ, ಅದನ್ನು ಯಾವ ರೀತಿ

ಸರಿದೂಗಿಸಿಕೊಳ್ಳುತ್ತೀರಿ ಎನ್ನುವುದನ್ನು ಸ್ಪಷ್ಟವಾಗಿ ತಾವು ಉತ್ತರವನ್ನು ಕೊಡುವಂಥ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆದರೆ ರಾಜ್ಯಪಾಲರು ಭಾಷಣ ಮಾಡುವಂಥ ಸಂದರ್ಭದಲ್ಲಿ ಈ ಯಾವ ವಿಚಾರವನ್ನು ತಾವು ಪ್ರಸ್ತಾವನೆ ಮಾಡಿಲ್ಲ. ಏಕೆಂದರೆ ಸಿದ್ದರಾಮಯ್ಯನವರು ಈ ರಾಜ್ಯಕ್ಕೆ ಮುಖ್ಯಮಂತ್ರಿಗಳಾದ ಮೇಲೆ ಅವರು ಘೋಷಣೆ ಮಾಡಿರುವುದರಲ್ಲಿ ರಾಜ್ಯಪಾಲರ ಭಾಷಣದಲ್ಲಿ 2 ರೂ.ಗಳಿಗೆ ಬದಲಾಗಿ 4 ರೂ.ಗಳ ಪ್ರೋತ್ಸಾಹಧನ ಹಾಲಿಗೆ ಕೊಡುವುದು ಆಗಿರಬಹುದು, ಅದೇ ರೀತಿಯಲ್ಲಿ ವಸತಿ ಯೋಜನೆಗೆ ಜಾಸ್ತಿ ಹಣ ಕೊಡುವ ವಿಷಯ ಆಗಿರಬಹುದು. ಈ ನಿಗಮ ಮಂಡಳಿಗಳಲ್ಲಿ ಮಾಡಿದಂಥ ಸಾಲ ಮತ್ತು ಬಡ್ಡಿ ಮನ್ನಾ ವಿಷಯದಲ್ಲಿ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವನ್ನೂ ಕೂಡ ಮಾಡಿಲ್ಲ. ಅದನ್ನು ಯಾವ ರೀತಿಯಲ್ಲಿ ಸರಿಪಡಿಸಿಕೊಳ್ಳುತ್ತಾರೆನ್ನುವ ವಿಷಯ ಕೂಡ ತಾವು ನಮ್ಮ ಗಮನಕ್ಕೆ ತರಬೇಕು ಮತ್ತು ಸ್ಪಷ್ಟೀಕರಣ ಕೊಡುವಂಥ ಸಂದರ್ಭದಲ್ಲಿ ತಿಳಿಸಬೇಕೆಂದು ನಾನು ತಮ್ಮಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ಪತ್ರಿಕೆಯಲ್ಲಿ ಇವತ್ತು sugar problem ಬಗ್ಗೆ ಬಂದಿದೆ. ಬಡವರಿಗೆ ಒಂದು ರೂ.ಗೆ ಅಕ್ಕಿ ಕೊಡುವುದರ ಬಗ್ಗೆ ಘೋಷಣೆಯನ್ನು ಮಾಡಿದಿರಿ. ಇದು ಬಹಳಷ್ಟು ಚೆನ್ನಾಗಿದೆ, ನಾನು ಇಲ್ಲವೆನ್ನುವುದಕ್ಕೆ ಹೋಗುವುದಿಲ್ಲ. ಇದನ್ನು ಯಾವ ರೀತಿಯಲ್ಲಿ ಸರಿಪಡಿಸಿಕೊಳ್ಳುತ್ತೀರಿ? ಸುಮಾರು 5872 ಕೋಟಿ ರೂ.ಗಳಷ್ಟು ತಮ್ಮ ಬೊಕ್ಕಸಕ್ಕೆ ಅಕ್ಕಿ ಕೊಡುವುದರಿಂದ ನಷ್ಟವಾಗುತ್ತದೆ. ನಮಗೆ ಸುಮಾರಾಗಿ ಬೇಕಾಗಿರುವುದು 97 ಲಕ್ಷ ಜನರಿಗೆ 1.60 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಬೇಕಾಗಿರುತ್ತದೆ. ಅದನ್ನು ಯಾವ ರೀತಿಯಲ್ಲಿ ಸರಿ ಮಾಡುತ್ತೀರೋ ಮಾಡಿ. ಜೂನ್ ಒಂದನೇ ತಾರೀಖಿನಿಂದ ಜಾರಿಯಿರುವ ಸಕ್ಕರೆ ನಿಯಂತ್ರಣ ನೀತಿ ಪ್ರಕಾರ, ಇದಕ್ಕಿಂತ ಮೊದಲು ಯಾರ್ಯಾರು ಕಬ್ಬಿನ ಮಾಲೀಕರು ಇದ್ದಾರೋ ಅವರು 10% ಕೇಂದ್ರ ಸರ್ಕಾರಕ್ಕೆ ಕೊಡಬೇಕಾಗಿತ್ತು. ಇವತ್ತು ಸಕ್ಕರೆ ನಿಯಂತ್ರಣ ನೀತಿ ಜಾರಿಯಲ್ಲಿರುವ ಕಾರಣ, ಇನ್ನು ಮುಂದೆ ಅವರೆಲ್ಲರೂ open market ನಲ್ಲಿ ಮಾರಿಕೊಳ್ಳಬಹುದು. ನಮಗೆ ಪ್ರತಿ ತಿಂಗಳಿಗೆ 8,636 ಟನ್ ಸಕ್ಕರೆ ಬೇಕಾಗಿತ್ತು. ಸಕ್ಕರೆ ಮುಕ್ತ ಮಾರುಕಟ್ಟೆಯಲ್ಲಿ 32 ರೂಪಾಯಿ ಕೆ.ಜಿ.ಗೆ ಸಿಗುತ್ತಿತ್ತು. ನ್ಯಾಯಬೆಲೆ ಅಂಗಡಿಗಳಲ್ಲಿ 13.50 ರೂಪಾಯಿ ಕೆ.ಜಿ. ಗೆ ಸಿಗುತ್ತಿತ್ತು. ಆ difference amount ಏನಿದೆಯೋ ಅದನ್ನು ಕೇಂದ್ರ ಸರ್ಕಾರ ಎಲ್ಲಾ ನ್ಯಾಯಬೆಲೆ ಅಂಗಡಿಗಳಿಗೆ ಕೊಡುತ್ತಿತ್ತು. ಇವತ್ತು ಈ ಹೊಸ

ನೀತಿ ಜಾರಿಯಲ್ಲಿರುವ ಕಾರಣ, ಬಡವರಿಗೆ ಈ ತಿಂಗಳಿನಿಂದಲೇ ನ್ಯಾಯಬೆಲೆ ಅಂಗಡಿಗಳಲ್ಲಿ ರೇಷನ್ ಸಿಗುವುದರ ಜೊತೆಯಲ್ಲಿ ಸಕ್ಕರೆ ಸಿಗುವುದಿಲ್ಲ. ಸಕ್ಕರೆ ಸಿಗುವುದಿಲ್ಲವೆಂದರೆ ನೀವು ಯಾವ ರೀತಿ ಅದನ್ನು ಸರಿಪಡಿಸಿಕೊಳ್ಳುತ್ತೀರಿ? ಜನರಿಗೆ ಸಕ್ಕರೆ ಇಲ್ಲವೆಂದರೆ ತುಂಬಾ ಕಷ್ಟವಾಗುತ್ತದೆ. ಇವತ್ತು ಯಾರ್ಯಾರು ಕಬ್ಬಿನ ಮಾಲೀಕರಿದ್ದಾರೋ, sugar factory ಮಾಲೀಕರು ಇದ್ದರೋ, ಇದಕ್ಕಿಂತ ಮುಂಚೆ 10% ಕೇಂದ್ರ ಸರ್ಕಾರಕ್ಕೆ ಕೊಡಬೇಕಾಗಿತ್ತು. ಆ 10% ಈಗ ಇಲ್ಲವೆನ್ನುವ ಹೊಸ ನೀತಿ ಜಾರಿಯಲ್ಲಿರುವ ಕಾರಣ, ಇವತ್ತು ನೀವು ಬಡವರಿಗೋಸ್ಕರವಾಗಿ ಒಂದು ರೂಪಾಯಿ ದರದಲ್ಲಿ ಕೆ.ಜಿ. ಅಕ್ಕಿಯನ್ನು ಕೊಡುತ್ತೇವೆ ಎಂದು ಹೇಳಿದ್ದೀರಿ. ಅದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅದರ ಜೊತೆಯಲ್ಲಿ ಈ ತಿಂಗಳಿನಿಂದಲೇ ಸಕ್ಕರೆ ಸಮಸ್ಯೆ ಪ್ರಾರಂಭವಾಗಿದೆ. ಎಲ್ಲಾ ನ್ಯಾಯಬೆಲೆ ಅಂಗಡಿಗಳಲ್ಲಿ ಸಕ್ಕರೆ ಸಿಗುವುದಿಲ್ಲ. ಅದಕ್ಕಿಂತ ಮುಂಚೆ ನಮಗೆ ಕೇಂದ್ರ ಸರ್ಕಾರದಿಂದ ನೆರವು ಸಿಗುತ್ತಿತ್ತು. open market ನಲ್ಲಿ 32 ರೂಪಾಯಿ ಕೆ.ಜಿ.ಗೆ ಸಿಗುತ್ತಿತ್ತು. ನ್ಯಾಯಬೆಲೆ ಅಂಗಡಿಯಲ್ಲಿ 13.50 ರೂಪಾಯಿಗೆ ಸಿಗುತ್ತಿತ್ತು. sugar factory ಮಾಲೀಕರು 10% ಕೊಡುತ್ತಿದ್ದರು. ಇವತ್ತು 10% ಕೊಡುವುದು ಬೇಕಾಗಿಲ್ಲ. open market ನಲ್ಲಿ ಮಾರಿಕೊಳ್ಳಬಹುದು ಎಂದ ತಕ್ಷಣ ಬಡವರಿಗೆ ಯಾವ ರೀತಿ ಸಕ್ಕರೆ ಕೊಡುತ್ತೀರಿ? ಆಕಸ್ಮಿಕವಾಗಿ ಆ ನ್ಯಾಯಬೆಲೆ ಅಂಗಡಿಗಳಲ್ಲಿ ಏನು difference amount ಇದೆ, ಅದು ರಾಜ್ಯ ಸರ್ಕಾರ ಕೊಡುತ್ತದೆಯೋ ಎನ್ನುವುದರ ಬಗ್ಗೆ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರು ಸ್ಪಷ್ಟೀಕರಣ ಕೊಡುವಂತಹ ಸಂದರ್ಭದಲ್ಲಿ ಈ ರಾಜ್ಯದ ಜನತೆಗೆ ತಿಳಿಸಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಸಾಕಷ್ಟು ನೆರೆ ಸಂತ್ರಸ್ತರು, ಕಳೆದ 4 ವರ್ಷಗಳಿಂದ ಜಾಸ್ತಿ ಮಳೆಯಾಗಿ ಪ್ರಕೃತಿ ವಿಕೋಪವಾದಂತಹ ಸಂದರ್ಭದಲ್ಲಿ ಸಾಕಷ್ಟು ಜನರು ಮನೆಯನ್ನು ಕಳೆದುಕೊಂಡಿದ್ದಾರೆ. ಈಗ ಮಳೆಗಾಲ ಪ್ರಾರಂಭವಾಗಿದೆ. ಇವತ್ತಿನವರೆಗೂ ಅವರಿಗೆ ಒಂದು ಸೂರು ಇಲ್ಲದಂತೆ ಸಾಕಷ್ಟು ಜನರು ಅದೇ ಶೆಡ್‌ನಲ್ಲಿ ಜೀವನ ಮಾಡುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ವಿನಂತಿ ಮಾಡುವುದೇನೆಂದರೆ, ಈ ರಾಜ್ಯದಲ್ಲಿ ಪ್ರಕೃತಿ ವಿಕೋಪವಾದ ಸಂದರ್ಭದಲ್ಲಿ ಸಾಕಷ್ಟು ಜನರು ಬೀದಿಪಾಲಾಗಿದ್ದರು. ಬೀದಿಪಾಲಾಗಿದ್ದ ಸಂದರ್ಭದಲ್ಲಿ ಸರ್ಕಾರದಿಂದ ಎಲ್ಲರಿಗೂ ಮನೆಗಳನ್ನು ಕಟ್ಟಿಕೊಡುವಂತಹ ಕೆಲಸ ಆಗಿತ್ತು.

ಆದರೆ ಇವತ್ತಿನವರೆಗೂ ಮನೆ ನಿರ್ಮಾಣ ಕೆಲಸಗಳು ಪೂರ್ಣವಾಗಿಲ್ಲ. ಇವತ್ತು ಜನರು ಶೆಡ್‌ನಲ್ಲಿ ಜೀವನ ಮಾಡುತ್ತಿದ್ದಾರೆ. ಒಂದು ಕಡೆ ಮಳೆಗಾಲ ಪ್ರಾರಂಭವಾಗಿದೆ. ಮಳೆಗಾಲ ಪ್ರಾರಂಭವಾದ ತಕ್ಷಣವೇ ತಮಗೆಲ್ಲಾ ಗೊತ್ತಿರಬಹುದು, ಸಾಕಷ್ಟು ಸೊಳ್ಳೆಗಳು ಜಾಸ್ತಿಯಾಗಿರುವ ಕಾರಣ ಒಂದು ಕಡೆ ಡೆಂಗ್ಯೂ ಜ್ವರ ಬರುತ್ತಿದೆ. ಅವರನ್ನು ಎಲ್ಲೋ ಒಂದು ಕಡೆ ರಕ್ಷಣೆ ಮಾಡುವಂತಹ ಕೆಲಸ ಆಗಬೇಕು. ಈ ನೆರೆ ಸಂತ್ರಸ್ತರಿಗೆ ಸಂಪೂರ್ಣವಾಗಿ ಮನೆಗಳನ್ನು ಕಟ್ಟಿಕೊಡುವಂತಹ ವ್ಯವಸ್ಥೆ ಆಗಬೇಕು. ಮಾನ್ಯ ಮುಖ್ಯಮಂತ್ರಿಗಳು ಆದಷ್ಟು ಬೇಗನೆ ಮುಂಜಾಗ್ರತೆ ವಹಿಸಿ ಮಾಡಿಕೊಡಬೇಕೆಂದು ವಿನಂತಿಸಿಕೊಳ್ಳುತ್ತೇನೆ. ನೆರೆ ಸಂತ್ರಸ್ತರು ಸಾಕಷ್ಟು ತೊಂದರೆಯಲ್ಲಿದ್ದಾರೆ. ಅವರ ಮಕ್ಕಳಿಗೆ ಶಾಲೆಗಳು ಇಲ್ಲ, ಒಂದು ಕಡೆ ಮಕ್ಕಳಿಗೆ ಆಟವಾಡಲು ಮೈದಾನಗಳು ಇಲ್ಲ, ಆಸ್ಪತ್ರೆಗಳು ಇಲ್ಲ. ಡೆಂಗ್ಯೂ ಜ್ವರ ಜಾಸ್ತಿಯಾಗಿರುವುದನ್ನು ಸಾಕಷ್ಟು ಪತ್ರಿಕೆಗಳಲ್ಲಿ ಆರೋಗ್ಯ ಮಂತ್ರಿಗಳು ನೋಡುತ್ತಿದ್ದೀರಿ. ಡಾ. ಬಿ.ಟಿ.ರುದ್ರೇಶ್‌ರವರು ನಾನು ಹೋಮಿಯೋಪತಿ ಔಷಧಿಯಿಂದ ಡೆಂಗ್ಯೂ ಜ್ವರವನ್ನು ಸರಿಪಡಿಸಿಕೊಡುತ್ತೇನೆ ಎಂದು ಪತ್ರಿಕೆಯಲ್ಲಿ ಹೇಳಿಕೆ ಕೊಟ್ಟಿರುವುದು ಬಂದಿದೆ. ಅದರ ಪ್ರಕಾರ ಡಾ. ರುದ್ರೇಶ್‌ರವರನ್ನು ಆದಷ್ಟು ಬೇಗ ಸಂಪರ್ಕ ಮಾಡಲಿ ಎಂದು ವಿನಂತಿ ಮಾಡುತ್ತಿದ್ದೇನೆ. ಈ ರಾಜ್ಯದ ಮುಖ್ಯಮಂತ್ರಿಗಳಾದಂತಹ ಸನ್ಮಾನ್ಯ ಸಿದ್ದರಾಮಯ್ಯನವರು ಏನು ಬಸವ ಜಯಂತಿ ದಿನದಂದು ಅಧಿಕಾರ ವಹಿಸಿಕೊಂಡ ನಂತರ, ಇದಕ್ಕಿಂತ ಮುಂಚೆ ಫಲಾನುಭವಿಗಳಿಗೆ ಮನೆಗಳನ್ನು ಕಟ್ಟಿಸಿಕೊಡುವ ವಿಚಾರದಲ್ಲಿ ಬಸವ ವಸತಿ ಯೋಜನೆ ಅಡಿಯಲ್ಲಿ ಅವರಿಗೆ 75,000 ರೂಪಾಯಿ ಸಿಗುತ್ತಿತ್ತು. ನಂತರ ಅದನ್ನು 1 ಲಕ್ಷದ 20 ಸಾವಿರ ರೂಪಾಯಿಗೆ ಏರಿಸಲಾಗಿದೆ. ಸಾಕಷ್ಟು ಮಂದಿ ಫಲಾನುಭವಿಗಳಿಗೆ ಇದಕ್ಕಿಂತ ಮುಂಚೆ 75,000 ರೂಪಾಯಿ ಏನು ಕೊಡಬೇಕಾಗಿತ್ತು, ಅದೇ ಹಣ ಸಿಗುತ್ತಿಲ್ಲ. ಸಾಕಷ್ಟು ಮಂದಿ lintel level ಗೆ ಬಂದಿದ್ದರೂ ಸಹ, computer locking system, ಆ system ಎಂದು ಹೇಳಿ, ಇವತ್ತಿನವರೆಗೂ ಕೂಡ ಅವರಿಗೆ ಹಣ ಮುಟ್ಟಿಲ್ಲ. ಸಾಕಷ್ಟು ಜನರು ಸ್ವಂತ ರೊಕ್ಕದಿಂದ lintel level ನಿಂದ ಕಟ್ಟಿಸಿಕೊಂಡಿದ್ದರೂ ಕೂಡ ಅವರಿಗೆ ಹಣ ಸಿಗುತ್ತಿಲ್ಲ. ಇವತ್ತು 1 ಲಕ್ಷದ 20 ಸಾವಿರ ರೂಪಾಯಿಗೆ ಏನು ಹೊಸ ಯೋಜನೆಯಲ್ಲಿ ಏರಿಸಲಾಗಿದೆ ಅದರ ಪ್ರಕಾರ ತಾವು ಕೊಡುತ್ತೀರಾ? ಇಲ್ಲವಾದರೆ ಹಳಬರು ಏನು 75,000

ರೂಪಾಯಿಯಲ್ಲಿ ಮನೆ ಕಟ್ಟಿಕೊಂಡಿದ್ದಾರೋ, ಅವರ ಸ್ವಂತ ರೊಕ್ಕದಿಂದ ಏನು ಕಟ್ಟಿಕೊಂಡಿದ್ದಾರೋ ಅವರಿಗೆ 75,000 ರೂಪಾಯಿಯಲ್ಲಿ ಕೊಡುತ್ತೀರೋ1 ಲಕ್ಷದ 20 ಸಾವಿರ ರೂಪಾಯಿಯಲ್ಲಿ ಕೊಡುತ್ತಿರೋ ಎನ್ನುವುದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು. ಈಗ ಹೊಸದಾಗಿ ಏನು 43 ತಾಲ್ಲೂಕುಗಳು, ಹೊಸ ಎಂದು ಘೋಷಣೆಯಾದವು, ಅದರಲ್ಲಿ ನಮ್ಮ ಉತ್ತರ ಕರ್ನಾಟಕಕ್ಕೆ ನಂಜುಂಡಪ್ಪ ವರದಿ ಸೇರಿದಂತೆ ಅತಿ ಹಿಂದುಳಿದಂತಹ ತಾಲ್ಲೂಕುಗಳು 3 ತಾಲ್ಲೂಕುಗಳಾಗಿ ಏನು ಘೋಷಣೆ ಮಾಡಿದ್ದಾರೋ, ಅದರಲ್ಲಿ ಅತಿ ಹಿಂದುಳಿದ ತಾಲ್ಲೂಕುಗಳು ಹೈದರಾಬಾದ್–ಕರ್ನಾಟಕದಲ್ಲಿ 18 ತಾಲ್ಲೂಕುಗಳು ಸೇರುತ್ತಿವೆ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪ ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇವತ್ತು 18 ತಾಲ್ಲೂಕುಗಳನ್ನು ಹೊಸದಾಗಿ ಏನು ಘೋಷಣೆ ಮಾಡಿದ್ದೀರೋ, ನಂತರ ನಾನು ರೆವಿನ್ಯೂ ಮಿನಿಸ್ಟರ್‌ರವರ ಸೇಟ್‌ಮೆಂಟ್ ಅನ್ನೂ ಕೂಡ ನೋಡಿದೆ. ಎಲ್ಲೋ ಒಂದು ಕಡೆ ಘೋಷಣೆ ಮಾಡಿದಂತಹ ಎಲ್ಲಾ ತಾಲ್ಲೂಕುಗಳನ್ನು ನಾವು ತಡೆದಿದ್ದೇವೆ ಎನ್ನುವ ಮಾತನ್ನು ಅವರು ಹೇಳಿದರು. ನಾನು ಅವರಲ್ಲಿ ವಿನಂತಿ ಮಾಡುತ್ತಿದ್ದೇನೆ, ನಮ್ಮ ಹೈದರಾಬಾದ್–ಕರ್ನಾಟಕಕ್ಕೆ ವಿಶೇಷವಾಗಿ ಏನು Article 371 ಜಾರಿಗೆ ಬಂದಿದೆ, ಅದರ ಪ್ರಕಾರ ಬಹಳಷ್ಟು ಹಿಂದುಳಿದ ತಾಲ್ಲೂಕು, ಈ ಹಿಂದೆ 18 ತಾಲ್ಲೂಕುಗಳು ಹೈದರಾಬಾದ್–ಕರ್ನಾಟಕದಲ್ಲಿ ಇದ್ದವೋ ಅವುಗಳನ್ನು ಆದಷ್ಟು ಬೇಗನೆ ಸೇರಿಸಿ ಪೂರ್ಣ ಮಾಡುವಂತಹ ಕೆಲಸ ತಾವು ಮಾಡಿ ಎಂದು ನಾನು ವಿನಂತಿ ಮಾಡುತ್ತಿದ್ದೇನೆ. ಹೈದರಾಬಾದ್–ಕರ್ನಾಟಕಕ್ಕೆ ವಿಶೇಷವಾದಂತಹ ಸ್ಥಾನಮಾನ ಸಿಕ್ಕಿದ ನಂತರ, ನಾವು ಇವತ್ತು ಆ ಸವಲತ್ತುಗಳನ್ನು ಪಡೆದುಕೊಳ್ಳಬೇಕಾದರೆ, ನಿಯಾಮವಳಿಗಳನ್ನು ಪ್ರಾರಂಭ ಮಾಡಬೇಕಾಗುತ್ತದೆ. ನಿಯಾಮವಳಿಗಳನ್ನು ಮಾಡದೇ ಹೈದರಾಬಾದ್–ಕರ್ನಾಟಕಕ್ಕೆ ಏನು ಸ್ಥಾನಮಾನ ಸಿಗಬೇಕಾಗಿದೆ, ಆ ಸವಲತ್ತುಗಳನ್ನು ಪಡೆದುಕೊಳ್ಳಬೇಕಾಗಿದೆ. ಅದು ಸಿಗಬೇಕಾದರೆ ತುಂಬಾ ಕಷ್ಟವಾಗುತ್ತದೆ. ದಯವಿಟ್ಟು ತಾವು ನಿಯಮಾವಳಿಯನ್ನು ಪ್ರಾರಂಭ ಮಾಡಿ ಎಂದು ನಾನು ವಿನಂತಿ ಮಾಡುತ್ತಿದ್ದೇನೆ.

ಸನ್ಮಾನ್ಯ ರಾಜ್ಯಪಾಲರು ಭಾಷಣ ಮಾಡುವಂತಹ ಸಂದರ್ಭದಲ್ಲಿ ಈ ಭ್ರಷ್ಟಾಚಾರದ ಬಗ್ಗೆ ಹೇಳುತ್ತಾ ಬಹಳಷ್ಟು ನಮ್ಮ ದೇಶದಲ್ಲಿ, ನಮ್ಮ ಕರ್ನಾಟಕ

ರಾಜ್ಯದಿಂದ ಬಹಳಷ್ಟು ತಲೆತಗ್ಗಿಸುವಂತಹ ಕೆಲಸ ಆಗಿದೆ ಎಂದು ಹೇಳಲಾಯಿತು. ನನ್ನ ಕಳಕಳಿ ಇಷ್ಟೆ, ಕಳೆದ 9 ವರ್ಷಗಳಿಂದ ಕೇಂದ್ರ ಸರ್ಕಾರದಲ್ಲಿದ್ದಂತಹ ಸರ್ಕಾರ, ಭಾರತ ದೇಶವನ್ನು ಕರ್ನಾಟಕ ರಾಜ್ಯ ತಲೆತಗ್ಗಿಸುವಂತಹ ಕೆಲಸ ಏನು ಮಾಡಿದೆಯೋ ಇಡೀ ದೇಶದಲ್ಲಿ, ವಿಶ್ವದಲ್ಲಿ ನಮ್ಮ ಭಾರತ ದೇಶ ತಲೆತಗ್ಗಿಸುವಂತಹ ಕೆಲಸವನ್ನು ಕೇಂದ್ರ ಸರ್ಕಾರ ಮಾಡಿದೆ.

ಅಧ್ಯಕ್ಷರು : ಅದು ಅನವಶ್ಯಕ ವಿಷಯ. ಅದು ಬೇಡ. ಬೇಗ ಮಾತನಾಡಿ ಮುಗಿಸಿ. 20 ನಿಮಿಷ ಆಯಿತು.

ಶ್ರೀ ಬಿ.ಶ್ರೀರಾಮುಲು : ಇನ್ನು 10 ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ನಾನು ಜಾಸ್ತಿ ಮಾತನಾಡಲಿಕ್ಕೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ. ರಾಜ್ಯಪಾಲರು ಭಾಷಣ ಮಾಡಿದಂತಹ ಕಾವೇರಿ ವಿಷಯದ ಬಗ್ಗೆ, ರೈತರ ಹಿತಾಸಕ್ತಿ ಕಾಪಾಡಲಿಕ್ಕೆ ವಿರೋಧ ಪಕ್ಷದ ನಾಯಕರುಗಳು ಎಲ್ಲರೂ ಕೂಡಿ ಏನು ಅಭಿಪ್ರಾಯ ವ್ಯಕ್ತಪಡಿಸಿದರು ಅದಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸುತ್ತೇನೆ. ಅದೇ ರೀತಿ ಇವತ್ತು ಎಲ್ಲೋ ಒಂದು ಕಡೆ ಕಾವೇರಿ ವಿಷಯ ಬಂದಂತಹ ಸಂದರ್ಭದಲ್ಲಿ ಈ ಸದನದಲ್ಲಿರುವ ವಿರೋಧ ಪಕ್ಷದ ನಾಯಕರು, ಆಡಳಿತ ಪಕ್ಷದ ನಾಯಕರು, ನಾವೆಲ್ಲರೂ ಕೂಡ ಎದ್ದು ನಿಂತು ಮಾತನಾಡುತ್ತಿದ್ದೇವೆ. ಬಹಳಷ್ಟು ನನಗೆ ಸಂತೋಷ ಇದೆ. ಹೆಮ್ಮೆ ಇದೆ. ಆದರೆ ಉತ್ತರ ಕರ್ನಾಟಕ ಭಾಗದಲ್ಲಿರುವಂತಹ ತುಂಗಭದ್ರಾ ಜಲಾಶಯದ ಬಗ್ಗೆ ನನ್ನ ಕಳಕಳಿ ಇಷ್ಟೆ. ಮುಂಗಾರು ಆಗಿ ಹೋಯಿತು. ಹಿಂಗಾರು ಬಂರುತ್ತಿದೆ. ತುಂಗಭದ್ರಾ ಅಣೆಕಟ್ಟಿನಲ್ಲಿ ಏನು ಇವತ್ತು ನೀರು ತುಂಬಿಕೊಂಡಿದೆ, ಅಲ್ಲಿ ಸಾಕಷ್ಟು ಹೂಳು ತುಂಬಿಕೊಂಡಿದೆ. ಅದನ್ನು ತೆಗೆಸಬೇಕೆಂದು ನಾನು ಬಹಳಷ್ಟು ಹೋರಾಟ ಮಾಡಿದ್ದೇನೆ. ಆ ಅಣೆಕಟ್ಟಿನಲ್ಲಿ ಸುಮಾರು 33 ಟಿ.ಎಂ.ಸಿ. ಹೂಳು ತುಂಬಿಕೊಂಡಿದೆ. ಅದು ರಾಜ್ಯಪಾಲರು ಭಾಷಣ ಮಾಡಿದಂತಹ ಸಂದರ್ಭದಲ್ಲಿ ಕಾವೇರಿ ವಿಷಯದ ಬಗ್ಗೆ ಮಾತನಾಡಿರು. ತುಂಬಾ ಸಂತೋಷ. ಅದೇ ರೀತಿಯಲ್ಲಿ ಭದ್ರಾದ ಬಗ್ಗೆ ಮಾತನಾಡಿದರು. ತುಂಬಾ ಸಂತೋಷ. ಆದರೆ ತುಂಗಭದ್ರಾದ ಬಗ್ಗೆ, ಆಲಮಟ್ಟಿಯ ಬಗ್ಗೆ ಅವರು ಮಾತನಾಡಿಲ್ಲ. ಉತ್ತರ ಕರ್ನಾಟಕದ ಜನರನ್ನು ನಿರ್ಲಕ್ಷ್ಯ ಮಾಡುತ್ತಿದ್ದಾರೆ ಎಂಬ ಭಾವನೆ ಇರುವ ಕಾರಣ ಎಲ್ಲೋ ಒಂದು ಕಡೆ

ನನಗೆ ನೋವಿದೆ. ತುಂಗಭದ್ರಾ ವಿಷಯದಲ್ಲಿ ಬಳ್ಳಾರಿ ಆಗಿರಬಹುದು, ಕೊಪ್ಪಳ ಆಗಿರಬಹುದು, ರಾಯಚೂರು ಜಿಲ್ಲೆಯಲ್ಲಿದ್ದಂತಹ ಸುಮಾರು 9 ಲಕ್ಷ ಎಕರೆ ನೀರಾವರಿ ಪ್ರದೇಶವನ್ನು ಅವರು ಎಲ್ಲಾ ರೀತಿಯಲ್ಲಿಯೂ ಉಪಯೋಗಿಸಿಕೊಳ್ಳುತ್ತಿದ್ದಾರಾ? ಅದೇ ರೀತಿ ಕೊನೆ ಭಾಗದಲ್ಲಿರುವ ಸಾಕಷ್ಟು ಜನರಿಗೆ ನೀರು ಬರುತ್ತಿಲ್ಲ, ಆಂಧ್ರ ಪ್ರದೇಶ ಆಗಿರಬಹುದು, ನಂತರ ನಮ್ಮ ಕರ್ನಾಟಕದವರು ಆಗಿರಬಹುದು. ಒಪ್ಪಂದದ ಮೇರೆಗೆ 65% ನೀರು ಕರ್ನಾಟಕಕ್ಕೆ ಸೇರುತ್ತದೆ. 35% ಆಂಧ್ರ ಪ್ರದೇಶಕ್ಕೆ ಸೇರಬೇಕೆಂದು ಆಗಿದೆ. ಒಪ್ಪಂದ ಮೇರೆಗೆ ಏನು ಆ ಡ್ಯಾಂ ಅನ್ನು ಕಟ್ಟಲಾಗಿದೆ. ಡ್ಯಾಂ ಕಟ್ಟಿದ ನಂತರ ಹೂಳನ್ನು ಎತ್ತಿಸದ ಕಾರಣ, ಈಗ ಸುಮಾರು 33 ಟಿ.ಎಂ.ಸಿ.ಹೂಳು ತೆಗೆಸಬೇಕಾಗಿದೆ. ಸುಮಾರು 1 ಟಿ.ಎಂ.ಸಿ. ಹೂಳನ್ನು ಎತ್ತಬೇಕೆಂದರೆ ತುಂಬಾ ಕಷ್ಟವಾಗುತ್ತದೆ. ಆ ರೀತಿ ಇದ್ದಾಗ ತುಂಗಭದ್ರಾ ಡ್ಯಾಂನಲ್ಲಿರುವ ಒಂದು ಟಿ.ಎಂ.ಸಿ.ಹೂಳನ್ನು ಎತ್ತಬೇಕಾದರೆ ಸರ್ಕಾರಕ್ಕೆ ಬಹಳಷ್ಟು ಕಷ್ಟವಾಗುತ್ತದೆ. ಬಹಳಷ್ಟು ಹೊರೆಯಾಗುತ್ತದೆ. ಸುಮಾರು ಎರಡೂವರೆ ಲಕ್ಷ ಲೋಡ್‌ಗಳನ್ನು ಲಾರಿಗಳಲ್ಲಿ ಎತ್ತಬೇಕಾಗುತ್ತದೆ. ನಂತರ ಹೂಳನ್ನು ತೆಗೆಯಬೇಕಾದರೆ ಒಂದು ಟಿಎಂಸಿಗೆ ಸುಮಾರು 1,000 ಕೋಟಿ ರೂಪಾಯಿಗಳು ಖರ್ಚಾಗುತ್ತದೆ. 33 ಟಿಎಂಸಿ ಹೂಳನ್ನು ಎತ್ತುವುದೇ? ನಾನು ಉತ್ತರಕ್ಕಾಗಿ ಉಪವಾಸ ಮಾಡುವಂತಹ ಸಂದರ್ಭದಲ್ಲಿ ಪರಮಶಿವಯ್ಯ ಅವರು ಒಂದು ಮಾತನ್ನು ಹೇಳಿದರು. ಆಗ ಅವರೂ ಸಹ ಆ ಕಾರ್ಯಕ್ರಮಕ್ಕೆ ಬಂದಿದ್ದರು. ಶ್ರೀರಾಮುಲುರವರೆ, 33 ಟಿಎಂಸಿ ಹೂಳನ್ನು ಎತ್ತುವುದಕ್ಕೆ ಕಷ್ಟವಾಗುತ್ತದೆ. ನೀವು ಒಂದು ಪ್ಲಾನ್ ಮಾಡಿ ಹೂಳನ್ನು ಎತ್ತುವುದಕ್ಕೆ, ಆಗಲಿಲ್ಲವೆಂದರೆ ಆದಷ್ಟುಬೇಗನೆ ಆ ಟಿ.ಬಿ.ಡ್ಯಾಂಅನ್ನು ಮೇಲಕ್ಕೆ ಎತ್ತರಿಸುವಂತಹ ಕೆಲಸವನ್ನು ಮಾಡಿ ಎಂದು ಅವರು ಸಲಹೆಯನ್ನು ಕೊಟ್ಟಿದರು. ಅದರ ಪ್ರಕಾರ ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಆದಷ್ಟು ಟಿ.ಬಿ.ಡ್ಯಾಂಅನ್ನು ಎತ್ತರಿಸುವಂತಹ ಕೆಲಸವನ್ನು ಮಾಡಿದರೆ ಆ ಭಾಗದಲ್ಲಿ 33 ಟಿಎಂಸಿ ಹೂಳು ತುಂಬಿಕೊಂಡಿರುವುದನ್ನು ಎಲ್ಲಾ ರೀತಿಯಿಂದಲೂ ಸರಿಪಡಿಸಬಹುದಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಬಳ್ಳಾರಿ ಜಿಲ್ಲೆಗೆ ಹೋದಂತಹ ಸಂದರ್ಭದಲ್ಲಿ ರೈತರು ಸಂತೋಷ ಪಡುವಂತಹ ರೀತಿಯಲ್ಲಿ ಮಾಡುತ್ತೇವೆನ್ನುವಂತಹ ಮಾತನ್ನು ಹೇಳಿದ್ದರು. ಅದರ ಪ್ರಕಾರ ಟಿ.ಬಿ.ಡ್ಯಾಂನಲ್ಲಿರುವಂತಹ ಹೂಳನ್ನು

ಎತ್ತುವಂತಹ ಕೆಲಸವನ್ನು ಮಾಡಬೇಕು. ಆಕಸ್ಮಿಕವಾಗಿ ಇಲ್ಲವೆಂದರೆ, ಅಲ್ಲಿ ತಡೆಗೋಡೆಯನ್ನು ಎತ್ತರ ಮಾಡುವಂತಹ ಕೆಲಸವನ್ನು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಆಲಮಟ್ಟಿ ಡ್ಯಾಂನ ವಿಚಾರವಾಗಿ ಮಾತನಾಡಬೇಕಾದರೆ, ಕೃಷ್ಣಾ ನ್ಯಾಯಾಧೀಕರಣದ ಆದೇಶದ ಪ್ರಕಾರ ಇವತ್ತು ಕಳೆದ ಎರಡು ವರ್ಷಗಳಿಂದ ಯುಕೆಪಿ ಮೂರನೇ ಹಂತಕ್ಕೆ ಸುಮಾರಿಗೆ 173 ಟಿಎಂಸಿ ಹೊಸದಾಗಿ ನೀರನ್ನು ಬಳಕೆ ಮಾಡುವಂತಹ ಅವಶ್ಯಕತೆ ಇದೆ. ಆದರೆ ಸಂಪೂರ್ಣವಾಗಿ ಬಳಕೆಯಾದಂತಹ ಆಲಮಟ್ಟಿ ಡ್ಯಾಂನಿಂದ ಸುಮಾರು 519.6 ರಿಂದ 524.5 ಮೀಟರ್‌ಗೆ ಏರಿಸಬೇಕಾಗಿತ್ತು. ಆದರೆ ಆದಷ್ಟು ಬೇಗನೆ ಅಲ್ಲಿ ತಡೆಗೋಡೆಯನ್ನು ಕಟ್ಟುವಂತಹ ಪ್ರಯತ್ನ ಮಾಡಬೇಕು. ಇಲ್ಲವೆಂದರೆ ತಡೆಗೋಡೆ ಕಟ್ಟಿರುವಂತಹ ಸುಮಾರು 21 ಗ್ರಾಮಗಳನ್ನು ಮಾಡುವಂತಹ ಕೆಲಸ ಮಾಡಬೇಕು. ಆದಷ್ಟು ಬೇಗನೆ ಅನ್ನು ಆ ಭಾಗದಲ್ಲಿರುವಂತಹ ನೀರಾವರಿ ಯೋಜನೆಗಳಿಗೋಸ್ಕ-ರವಾಗಿ ಕೂಡಲೇ ಪ್ರಾರಂಭ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಅಧಿಕಾರ ಬರುವಂತಹ ಸಂದರ್ಭದಲ್ಲಿ ಇವತ್ತು ಕೃಷ್ಣಾಗೋಸ್ಕರವಾಗಿ ಆ ಭಾಗದಲ್ಲಿರುವಂತಹ ನೀರಾವರಿ ಯೋಜನೆಗಳಿಗೋ--ಸ್ಕರವಾಗಿ ಸುಮಾರು 10 ಸಾವಿರ ಕೋಟಿ ರೂಪಾಯಿಗಳನ್ನು ಪ್ರತಿ ವರ್ಷವೂ ಕೊಡುತ್ತೇವೆನ್ನುವಂತಹ ಮಾತನ್ನು ಕೊಟ್ಟಿದ್ದರು. ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾಪವನ್ನು ಮಾಡಲಿಲ್ಲ. ಆದರೆ ಎಲ್ಲೋ ಒಂದು ಕಡೆ ನಮ್ಮ ಭಾಗದಲ್ಲಿದ್ದಂತಹ ಆಲಮಟ್ಟಿ ಡ್ಯಾಂ ಇರಬಹುದು, ತುಂಗಭದ್ರಾ ವಿಚಾರ ಇರಬಹುದು, ಈ ಬಗ್ಗೆ ಎಲ್ಲೋ ಒಂದು ಕಡೆ ನೋವಾಗುತ್ತಿದೆ. ಅಧಿಕಾರಕ್ಕೆ ಬರುವುದಕ್ಕಿಂತ ಮುಂಚೆ 10,000 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದರು. ಆದರೆ ಈ ಬಗ್ಗೆ ರಾಜ್ಯಪಾಲರ ಭಾಷಣದಲ್ಲಿ ಪ್ರಸ್ತಾವನೆಯನ್ನು ಮಾಡಲಿಲ್ಲ. ಆದಷ್ಟು ಬೇಗನೆ 10,000 ಕೋಟಿ ರೂಪಾಯಿಗಳ ಹಣವನ್ನು ಮೀಸಲು ಇಡಬೇಕು. ಆದಷ್ಟು ಬೇಗನೆ ಆ ಭಾಗದಲ್ಲಿದ್ದಂತಹ ಮುಳವಾಡ ಇರಬಹುದು, ಚಿಮ್ಮಲಗಿ ಇರಬಹುದು, ಗುತ್ತಿಬಸವಣ್ಣ, ಕೊಪ್ಪಳ, ಮುಲ್ಲಾಮಾರಿ ಯೋಜನೆಗಳು ಆಗಿರಬಹುದು. ಬಹಳಷ್ಟು ಕಾಮಗಾರಿಗಳು ಶೀಘ್ರಗತಿಯಲ್ಲಿ ನಡೆಯಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ. ನಾನು ತಮ್ಮ

ಮುಖಾಂತರ ವಿನಂತಿ ಮಾಡಿಕೊಳ್ಳುವುದಿಷ್ಟೇ, ಇವತ್ತು ರಾಜ್ಯಪಾಲರು ಭಾಷಣ ಮಾಡಿದಂತಹ ಸಂದರ್ಭದಲ್ಲಿ ಎಲ್ಲಾ ವಿಷಯಗಳನ್ನು ಗಮನಕ್ಕೆ ತರಬೇಕಾಗಿತ್ತು. ಆ ರೀತಿಯಾಗಿ ಗಮನಕ್ಕೆ ತರುವಂತಹ ಪ್ರಯತ್ನ ಮಾಡಲಿಲ್ಲ ನಾನು ಇನ್ನೂ ಹೆಚ್ಚು ಮಾತನಾಡಬೇಕೆಂದು ಇದ್ದೆ. ತಾವು ಅವಕಾಶವನ್ನು ಕೊಟ್ಟಿದಕ್ಕಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

6. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

(1.) ವಿಷಯ : ಪೊಲೀಸ್ ದೌರ್ಜನ್ಯದ ಬಗ್ಗೆ.

ಶ್ರೀ ಕೆ.ಜಿ.ಬೋಪಯ್ಯ (ವಿರಾಜಪೇಟೆ) : ಸನ್ಮಾನ್ಯ ಅಧ್ಯಕ್ಷರೆ, ಹೊಸ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ವಿಶೇಷವಾಗಿ ನಮ್ಮ ಜಿಲ್ಲೆಯಲ್ಲಿ ಈ ಪೋಲೀಸ್ ದೌರ್ಜನ್ಯ ವ್ಯವಸ್ಥಿತವಾಗಿ ನಡೆಯುತ್ತಿದೆ. ಈ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ಗಳು ಯಾವ ರೀತಿ ಇದಾರೆಂದರೆ ಪೊನ್ನಂಪೇಟೆಯಲ್ಲಿ ಸುಬ್ರಮಣಿ ಎಂಬ ಒಬ್ಬ ಸಬ್‌ಇನ್ಸ್‌ಪೆಕ್ಟರ್ ಇದ್ದಾರೆ. ಗೋಣಿಕೊಪ್ಪ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಆತ ವಾಸ ಇದ್ದಾನೆ. ಅಲ್ಲಿ ಕ್ವಾರ್ಟ್ರಸ್ ಎಲ್ಲಾ ವ್ಯವಸ್ಥೆ ಇದ್ದರೂ ಸಹ ಅವನು ಗೋಣಿಕೊಪ್ಪದಲ್ಲಿ ವಾಸ ಇದ್ದಾನೆ. ಈತನು ಅವರಿಗೆ ಆಪ್ತರಾಗಿರುವ ಖಾಸಗಿ ಮನೆಯಲ್ಲಿ ವಾಸವಿದ್ದಾರೆ. 22ನೇ ತಾರೀಖು ರಾತ್ರಿ 11.30 ಗಂಟೆಗೆ ಖಾಸಗಿ ವಾಹನದಲ್ಲಿ wrong sideನಲ್ಲಿ ಒಂದು ಈ ಕಡೆಯಿಂದ ಒಬ್ಬ ಸಾರ್ವಜನಿಕ ವ್ಯಕ್ತಿ ಹೋದಾಗ ಅವಾಚ್ಯ ಶಬ್ದಗಳಿಂದ ಬೈಯುತ್ತಾನೆ. Police Sub-Inspector ಬರುವಾಗ ದಾರಿ ಬಿಡುವುದಕ್ಕೆ ಆಗುವುದಿಲ್ಲ. ಅವರು ಯಾವ stage ನಲ್ಲಿದ್ದರು ಎನ್ನುವಂತಹದ್ದು ಗೊತ್ತಾಗಿದೆ. ಅವರು ಖಾಸಗಿ ವಾಹನದಲ್ಲಿ ಬಂದಾಗ ಅವರು ಪೊಲೀಸ್‌ನವರು ಎಂದು ಹೇಗೆ ಗೊತ್ತಾಗುತ್ತದೆ? ಅವರ ಮೇಲೆ ಹಲ್ಲೆ ನಡೆಸಿ ಅಲ್ಲಿಯೇ immediate ಆಗಿ ಗೋಣಿಕೊಪ್ಪ Police Stationಗೆ ಹೋಗಿ ದೂರು ಕೊಟ್ಟು ಮೊಕದ್ದಮೆಯನ್ನು ದಾಖಲು ಮಾಡುತ್ತಾರೆ. ಇವರು ತನ್ನ jurisdiction, ವ್ಯಾಪ್ತಿಯನ್ನು ಬಿಟ್ಟು ಬೇರೆ ಕಡೆಯಲ್ಲಿ ಮನೆಯನ್ನು ಮಾಡಿಕೊಂಡಿರುವುದೇ ಅಕ್ಷಮ್ಯ ಅಪರಾಧವಾಗಿದೆ. ಅದೂ ಖಾಸಗಿ ಮನೆಯಲ್ಲಿ! ಇಂತಹ ಪೊಲೀಸ್‌ನವರು ಇದ್ದರೆ ಇದು ಹೇಗೆ ಆಗಬಹುದು? ಈ ಅಧಿಕಾರಿಯ ಮೇಲೆ ಖಂಡಿತವಾಗಿ ನೀವು ಕಾನೂನು ಕ್ರಮ ತೆಗೆದುಕೊಳ್ಳಬೇಕು. ಅದರ ಜೊತೆಗೆ